ವಿಜಯಪುರ | ಸಂಪುಟ 01 | ಸಂಚಿಕೆ 292 | ಪುಟ 4 | ₹ 3.00

https://udayarashminews.com

udayarashmi 7026028778


# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಮಂಗಳವಾರ, ಜನವರಿ 16, 2024




"ದೇವರಹಿಪ್ಪರಗಿ ಕ್ಷೇತ್ರದಲ್ಲಿ ಹಲವೆಡೆ ಕುಡಿವ ನೀರಿನ ಸಮಸ್ಯೆ & ರಸ್ತೆಗಳ ಕೊರತೆಯಿದ್ದು, ಸರಿಪಡಿಸಲು ಪ್ರಯತ್ನಿಸುವೆ. ಕಲಕೇರಿಯನ್ನು ಹೋಬಳಿ ಎಂದು ಘೋಷಿಸಲು ಈಗಾಗಲೇ ಕಂದಾಯ ಸಚಿವರ ಗಮನಕ್ಕೆ ತಂದು ಚರ್ಚಿಸಿರುವೆ.

– ರಾಜುಗೌಡ ಪಾಟೀಲ, ಕುದರಿಸಾಲೊಡಗಿ
ಶಾಸಕರು, ದೇವರಹಿಪ್ಪರಗಿ

### ಅಯೋಧ್ಯೆ ರಾಮ ಮಂದಿರದಲ್ಲಿ ಜ.22ರಂದು ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತನೆಯ ಮೂರ್ತಿ ಪ್ರತಿಷ್ಠಾಪನೆ

# ರಾಮ ಮಂದಿರ: ಅಯೋಧ್ಯೆಗೆ ಕರುನಾಡ ರಾಮ!

ಮೈಸೂರು: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿ ಶ್ರೀ ರಾಮ ಮಂದಿರದ ಮೂರ್ತಿ ಪ್ರತಿಷ್ಠಾಪನೆ ಜ.22ರಂದು ನಡೆಯಲಿದೆ. ಕರ್ನಾಟಕದ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತನೆಯ ಶ್ರೀ ರಾಮನ ಪ್ರತಿಮೆ ರಾಮ ಮಂದಿರದಲ್ಲಿ ಪ್ರತಿಷ್ಠಾಪನೆಯಾಗಲು ಆಯ್ಕೆಯಾಗಿದೆ.

ಸಂಕ್ರಾಂತಿ ದಿನವಾದ ಸೋಮವಾರ ಈ ಕುರಿತು ರಾಮ ಜನ್ಮ ಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಮಾಹಿತಿ ನೀಡಿದೆ. ಅರುಣ್ ಯೋಗಿರಾಜ್ ಕೆತ್ತನೆಯ ರಾಮ ಲಲ್ಲಾ ಮೂರ್ತಿಯನ್ನು ಪ್ರತಿಷ್ಠಾಪನೆಗೆ ಆಯ್ಕೆ ಮಾಡಲಾಗಿದೆ ಎಂದು ಹೇಳಿದೆ.

ಅಯೋಧ್ಯೆಯ ಶ್ರೀ ರಾಮ ಮಂದಿರದ ಮೂರ್ತಿ ಪ್ರತಿಷ್ಠಾಪನೆ ಮಧ್ಯಾಹ್ನ 12.20ಕ್ಕೆ ಪ್ರಾಣ ಪ್ರತಿಷ್ಠಾ ಮಹೋತ್ಸವ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ. ಕರ್ನಾಟಕದ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತನೆಯ ರಾಮ ಲಲ್ಲಾ ಮೂರ್ತಿ ಪ್ರತಿಷ್ಠಾಪನೆಗೆ ಆಯ್ಕೆಯಾಗಿರುವುದು ರಾಜ್ಯಕ್ಕೆ ಹೆಮ್ಮೆಯ ಸಂಗತಿಯಾಗಿದೆ.

ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತನೆಯ ರಾಮ ಲಲ್ಲಾ ಮೂರ್ತಿಗೆ ಬಳಸಲಾದ ಕಲ್ಲು ಸಹ ನಮ್ಮ ಕರ್ನಾಟಕದ ಎಚ್. ಡಿ. ಕೋಟೆಯದ್ದು ಎಂಬುದು ಕರ್ನಾಟಕಕ್ಕೆ ಮತ್ತೊಂದು ಗರಿಯಾಗಿದೆ. ಶ್ರೀ ರಾಮನ ಮೂರ್ತಿ ಕೆತ್ತುವ ಐತಿಹಾಸಿಕ ಮತ್ತು ಪುಣ್ಯ ಕಾರ್ಯದಲ್ಲಿ ಭಾಗಿಯಾದ ಕರುನಾಡಿನ ಹೆಮ್ಮೆಯ ಶಿಲ್ಪಿಗೆ ವಿವಿಧ ರಾಜಕೀಯ ನಾಯಕರು ಅಭಿನಂದನೆ ಸಲ್ಲಿಸಿದ್ದಾರೆ.

ಶ್ರೀ ರಾಮ ಮಂದಿರದಲ್ಲಿ ಪ್ರತಿಷ್ಠಾಪನೆಯಾಗಲು ಮೂವರು ಶಿಲ್ಪಿಗಳು ಕೆತ್ತನೆ ಮಾಡಿರುವ ವಿಗ್ರಹಗಳನ್ನು ಕಳೆದ ವಾರ ಆಯ್ಕೆ ಮಾಡಲಾಗಿತ್ತು. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೆತ್ತನೆ ಸಹ ಆಯ್ಕೆಯಾಗಿತ್ತು. ಆದರೆ ಈ ಕುರಿತು ಅಧಿಕೃತ ಘೋಷಣೆಯಾಗಿರಲಿಲ್ಲ.

ಪ್ರಾಣ ಮೂರ್ತಿ ಪ್ರತಿಷ್ಠಾಪನೆ ಪೂರ್ವಭಾವಿ ವಿಧಿಗಳು ಜನವರಿ 16ರಂದು ಆರಂಭವಾಗಲಿದೆ. ಜನವರಿ 21ರ ತನಕ ವಿವಿಧ ಧಾರ್ಮಿಕ ಕಾರ್ಯಗಳು ನಡೆಯಲಿವೆ. ಪ್ರತಿಷ್ಠಾಪನೆಯ ಅಗತ್ಯವಿರುವ ಕೆಲವು ವಿಧಿಗಳು ಮಾತ್ರ ಜನವರಿ 22ರಂದು ನಡೆಯಲಿದೆ.

ಪ್ರಾಣ ಪ್ರತಿಷ್ಠಾಪನೆಗೆ ಆಯ್ಕೆಯಾಗಿರುವ ವಿಗ್ರಹ 150 ರಿಂದ 200 ಕೆಜಿ ತೂಕವಿದೆ. ರಾಮನನ್ನು ಐದು ವರ್ಷದ ಬಾಲಕನ ಪ್ರತಿರೂಪದಂತೆ ಕೆತ್ತನೆ ಮಾಡಲಾಗಿದೆ. ಕಳೆದ 70 ವರ್ಷಗಳಿಂದ ಪೂಜಿಸಲಾಗುತ್ತಿರುವ ರಾಮ ಲಲ್ಲಾನ ವಿಗ್ರಹವನ್ನು ಸಹ ನೂತನ ದೇವಾಲಯದ ಗರ್ಭಗುಡಿಯಲ್ಲಿ ಇಟ್ಟು ಪೂಜಿಸಲಾಗುತ್ತದೆ.



ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಪೋಸ್ಟ್‌ನಲ್ಲಿ, 'ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ನಮ್ಮೆಲ್ಲರ ಆರಾಧ್ಯ ದೈವ ಶ್ರೀರಾಮ ಲಲ್ಲಾ ಮೂರ್ತಿಯನ್ನು ಅಯೋಧ್ಯೆಯಲ್ಲಿ ಪ್ರತಿಷ್ಠಾಪಿಸಲು ನಿರ್ಧರಿಸಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಕರ್ನಾಟಕಕ್ಕೂ ಶ್ರೀರಾಮನಿಗೂ ಇರುವ ನಂಟಿಗೆ ಈಗ ಮತ್ತೊಂದು ಗರಿ ಸೇರ್ಪಡೆಯಾಗಿದ್ದು, ಸುಂದರ ಶ್ರೀರಾಮನ ಮೂರ್ತಿ ಕೆತ್ತನೆ ಮಾಡಿರುವ ಶಿಲ್ಪಿ ಅರುಣ್ ಯೋಗಿರಾಜ್ ಅವರಿಗೆ ಅಭಿನಂದನೆಗಳು' ಎಂದು ಹೇಳಿದ್ದಾರೆ.

## ಜಿಪಂ ನೂತನ ಸಿಇಓ ಋಷಿ ಆನಂದ ಅಧಿಕಾರ ಸ್ವೀಕಾರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾ ಪಂಚಾಯತಿಯ ನೂತನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾಗಿ ಋಷಿ ಆನಂದ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

ವಿಜಯಪುರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ರಾಹುಲ್ ಶಿಂಧೆ ಅವರು ಬೆಳಗಾವಿ ಜಿಲ್ಲೆಗೆ ವರ್ಗಾವಣೆಗೊಂಡಿರುವುದರಿಂದ ವಿಜಯಪುರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹುದ್ದೆಗೆ ಋಷಿ ಆನಂದ ಅವರನ್ನು



ವರ್ಗಾವಣೆಗೊಳಿಸಿ ಆದೇಶಿಸಿದೆ.

ವಿಜಯಪುರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹುದ್ದೆಗೆ ವರ್ಗಾವಣೆಗೊಂಡು ಆಗಮಿಸಿದ ಋಷಿ ಆನಂದ ಅವರನ್ನು ನಿರ್ಗಮಿತ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶಿಂಧೆ ಅವರು ಅಧಿಕಾರ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಡಾ.ವಿಜಯಕುಮಾರ ಆಜೂರ, ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಠೆ ಸೇರಿದಂತೆ ಜಿಲ್ಲಾ ಪಂಚಾಯತಿಯ ವಿವಿಧ ಅಧಿಕಾರಿಗಳು, ತಾಲೂಕಾ ಕಾರ್ಯನಿರ್ವಾಹಕ ಅಧಿಕಾರಿಗಳು

### ಅಪಘಾತ ಸಂಭವಿಸಿ ವಾರ ಕಳೆದರೂ ಸ್ವಚ್ಛತೆಗೆ ಮುಂದಾಗದ ಹೆದ್ದಾರಿ ಅಧಿಕಾರಿಗಳು

## ವಾಹನ ಸವಾರರ ಆಕ್ರೋಶ ; ಅಧಿಕಾರಿಗಳಿಗೆ ಹಿಡಿಶಾಪ!

**ಉದಯರಶ್ಮಿ ನ್ಯೂಸ್**

ಮೋರಟಗಿ: ಸಮೀಪದ ಹಂಚಿನಾಳ ಮತ್ತು ಗಬಸಾವಳಗಿ ಗ್ರಾಮದ ಮದ್ಯ ರಾಷ್ಟ್ರೀಯ ಹೆದ್ದಾರಿ 50 ರಲ್ಲಿ ಕಳೆದ 10ನೇ ತಾರೀಕು ಸರ್ಕಾರಿ ಬಸ್ಸಿಗೆ ಬೈಕ್ ಸವಾರನೊಬ್ಬ ಡಿಕ್ಕಿ ಹೊಡೆದ ಪರಿಣಾಮ ಸ್ಪರ್ಶ್ ತೀವ್ರಗೊಂಡು ಬಸ್ಸು ಸುಟ್ಟು ಭಸ್ಮವಾಗಿತ್ತು. ಘಟನೆ ಸಂಭವಿಸಿ ಒಂದು ವಾರ ಕಳೆದರೂ ಅಪಘಾತ ಸಂಭವಿಸಿದ ಸ್ಥಳದಲ್ಲಿ ರಾಷ್ಟ್ರಿಯ ಹೆದ್ದಾರಿ ಅಧಿಕಾರಿಗಳು ಸ್ವಚ್ಛತೆಗೆ ಮುಂದಾಗುತ್ತಿಲ್ಲ ಎಂದು ವಾಹನ ಸವಾರರು ಆಕ್ರೋಶ ವ್ಯಕ್ತಪಡಿಸಿ ಅಧಿಕಾರಿಗಳಿಗೆ ಹಿಡಿಶಾಪ ಹಾಕುತಿದ್ದಾರೆ.



ಘಟನಾ ಸ್ಥಳದಲ್ಲಿ ಹೆದ್ದಾರಿ ಮೇಲೆ ಸಣ್ಣ ಪುಟ್ಟ ಕಬ್ಬಿಣದ ಸಾಮಾನು ಬಿದ್ದಿರುವುದರಿಂದ ದ್ವಿಚಕ್ರ ವಾಹನ ಸವಾರರಿಗೆ ಅಪಘಾತಕ್ಕೆ ಆಹ್ವಾನ ನೀಡುತ್ತಿವೆ, ಇದು ಗೊತ್ತಿದ್ದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಸ್ವಚ್ಛತೆಗೆ ಏಕೆ ಮುಂದಾಗುತ್ತಿಲ್ಲ? ಹೆದ್ದಾರಿ ಸ್ವಚ್ಛತೆಗೆ ಸಿಬ್ಬಂದಿಗಳೇ ಇಲ್ವಾ? ಅಥವಾ ಬಸ್ಸು ಸುಟ್ಟಿರುವ ವಿಷಯ ಹೆದ್ದಾರಿ ಅಧಿಕಾರಿಗಳಿಗೆ ಗೊತ್ತೇ ಇಲ್ವಾ? ಎಂದು ವಾಹನ ಸವಾರರು ಪ್ರಶ್ನೆ ಮಾಡುತಿದ್ದಾರೆ.

ಬಸ್ಸು ಸುಟ್ಟಿರುವ ಪರಿಣಾಮ ಕಬ್ಬಿಣದ ಕೆಲವೊಂದು ಸಣ್ಣ ಸಣ್ಣ ಸಾಮಾನುಗಳು ಬಿದ್ದಿರುವುದರಿಂದ ರಾತ್ರಿವೇಳೆ ದ್ವಿಚಕ್ರ ವಾಹನಗಳು ಅಪಘಾತವಾಗುವ ಎಲ್ಲ ಸಾಧ್ಯತೆಗಳಿವೆ. ಅಮಾಯಕರ ಜೀವ ಹೋಗುವ ಮುನ್ನ ಅಧಿಕಾರಿಗಳು ಕೂಡಲೇ ಎಚ್ಚೆತ್ತಿಕೊಳ್ಳಬೇಕಿದೆ.

ರಾಷ್ಟ್ರೀಯ ಹೆದ್ದಾರಿ ಮೇಲೆ ಕೆಲವು ಕಡೆ ಇದೇ ತರಹ ಕಲ್ಲುಗಳು ಬಿದ್ದಿರುವುದು ಇರುತ್ತದೆ. ಕಲಬುರ್ಗಿ – ವಿಜಯಪುರ ಮಾರ್ಗವಾಗಿ ಎರಡು ಟೋಲ್ ಗಳಿವೆ. ಟೋಲ್ ಮುಖಾಂತರ ಸರಕಾರಕ್ಕೆ ಸಾಕಷ್ಟು ಹಣ ಕೂಡಾ ಹೋಗುತ್ತದೆ. ಪ್ರತಿ ದಿನ ಹೆದ್ದಾರಿ ಸಮೀಕ್ಷೆಗಾಗಿ ವಾಹನ ಕೊಟ್ಟು ಅಧಿಕಾರಿಗಳನ್ನು ನೇಮಕ ಮಾಡಿದರೂ ಪ್ರಯೋಜನೆ ಆಗುತ್ತಿಲ್ಲ. ಸ್ವಚ್ಛತೆಗೆ ಸಿಬ್ಬಂದಿ ಇದ್ದರೂ ಇಲ್ಲದಂತಾಗಿದೆ. ವಾಹನ ಸವಾರರಿಗೆ ಹೆದ್ದಾರಿ ಮೇಲೆ ಆಗುವ ಸಮಸ್ಯೆಗಳ ಕುರಿತು ಮನವಿ ಮಾಡಬೇಕೆಂದರೆ ಅವರ ಫೋನ್ ನಂಬರ್ ಸರಿಯಾಗಿ ಸಿಗುತ್ತಿಲ್ಲ. ಆ ಸ್ಥಳದಲ್ಲಿ ದುರ್ಘಟನೆ ನಡೆಯುವ ಮುನ್ನ ಎಚ್ಚೆತ್ತಿಕೊಂಡು ಸಂಬಂಧ ಪಟ್ಟ ಮೇಲಾಧಿಕಾರಿಗಳು ಸ್ವಚ್ಛತ್ವಗೆ ಮುಂದಾಗಬೇಕು ಎಂಬುದು ವಾಹನ ಸವಾರರ ಆಗ್ರಹವಾಗಿದೆ.

## ಬೆರಗು ಸಮಗ್ರ ಸಾಹಿತ್ಯ ಪ್ರಶಸ್ತಿಗೆ ಡಾ.ಲೋಕಾಪೂರ ಆಯ್ಕೆ

**ಉದಯರಶ್ಮಿ ನ್ಯೂಸ್**



ಆಲಮೇಲ: ತಾಲ್ಲೂಕಿನ ಕಡಣಿ ಗ್ರಾಮದ ಬೆರಗು ಪ್ರಕಾಶನ ಸಂಸ್ಥೆಯು ಪ್ರತಿವರ್ಷ ನೀಡುವ ಬೆರಗು ಸಮಗ್ರ ಸಾಹಿತ್ಯ ಪ್ರಶಸ್ತಿಯನ್ನು ಪ್ರಸಕ್ತ ಸಾಲಿನಲ್ಲಿ ಧಾರವಾಡದ ಹಿರಿಯ ಸಾಹಿತಿ ಡಾ. ಸಂಗಮನಾಥ ಲೋಕಾಪುರ ಅವರಿಗೆ ನೀಡಲು ನಿರ್ಧರಿಸಿದೆ ಎಂದು ಸಂಸ್ಥೆಯ ಅಧ್ಯಕ್ಷೆ ವಿಜಯಲಕ್ಷ್ಮಿ ಆರ್. ಕತ್ತಿ ತಿಳಿಸಿದ್ದಾರೆ.

ಪ್ರಶಸ್ತಿಯು ಹತ್ತು ಸಾವಿರ ರೂ.ಗಳ ನಗದು, ಸ್ಮರಣಿಕೆ ಮತ್ತು ಪ್ರಶಸ್ತಿ ಫಲಕ ಒಳಗೊಂಡಿದ್ದು ಇದೇ ತಿಂಗಳು 30 ರಂದು ಕಡಣಿಯಲ್ಲಿ ನಡೆಯುವ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಶ್ರೀಗಳ ಸಂಸ್ಮರಣಾರ್ಥ ಹಮ್ಮಿಕೊಂಡಿರುವ 30 ಪುಸ್ತಕಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದ್ದಾರೆ.

ಸಿಂದಗಿಯ ಸಿ.ಎಂ.ಮನಗೂಳಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಳೆದ ವರ್ಷ ನಿವೃತ್ತಿಯಾಗಿರುವ ಡಾ. ಸಂಗಮನಾಥ ಲೋಕಾಪೂರ ಅವರು ನಾಡಿನ ಹಿರಿಯ ತಲೆಮಾರಿನ ಶ್ರೇಷ್ಠ ಕತೆಗಾರರು, ಕತೆ, ವಿಮರ್ಶೆ, ಸಂಶೋಧನೆಗಳಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡಿರುವ ಅವರನ್ನು ಅವರ ಒಟ್ಟು ಜೀವಮಾನದ ಸಾಹಿತ್ಯಕ್ಕಾಗಿ ಬೆರಗು ಸಮಗ್ರ ಸಾಹಿತ್ಯ ಪ್ರಶಸ್ತಿ ನೀಡಲಾಗಿದೆ ಎಂದು ಆಯ್ಕೆ ಸಮಿತಿಯ ಡಾ. ರಮೇಶ ಕತ್ತಿ ತಿಳಿಸಿದ್ದಾರೆ. ಕಳೆದ ವರ್ಷ ಸ್ಥಾಪಿಸಲಾಗಿದ್ದ ಪ್ರಶಸ್ತಿಯು ವಿಜಯಪುರ ಜಿಲ್ಲೆಯ 60 ವರ್ಷದಾಟಿದ ಹಿರಿಯ ಸಾಹಿತಿಯೊಬ್ಬರನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಮೊದಲ ಪ್ರಶಸ್ತಿಯನ್ನು ಡಾ. ಚನ್ನಪ್ಪ ಕಟ್ಟಿ ಅವರಿಗೆ ನೀಡಲಾಗಿತ್ತು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಜ ನುಡಿ

ಗರ್ಭದಿಂದ ನಮನ ಎಂದರೆ ತಾಯಿಯೂ ತನ್ನ ಜೀವಿಸುವ ಸಮಯ ಬಂದ ಅವಧಿ ಮುಗಿದರೆ ಭೂತಾಯಿ ತನ್ನ ಗರ್ಭದೊಳಗೆ ನಮ್ಮನ್ನು ಕೊಳ್ಳುತ್ತಾಳೆ. ಗರ್ಭದಿಂದ ಗರ್ಭಕ್ಕೆ ಪಯಣಿಸುವ ಪ್ರಯಾಣವೇ ಈ ಬದುಕು.

–ಡಾ. ರಾಜಶೇಖರ ನಾಗೂರ

### ವಚನ ಚಿಂತನ 278



*ಲಿಂಗ ನಿರಾಳಚೈತನ್ಯ.*

*ಕಂಗಳಾಲಿಯ ಕರಿಯ ನಾಳದಲ್ಲಿ ಈರೇಳು ಭುವನಂಗಳಡಗಿದವು*
*ನಾಟಕ ನಾಟಕವ ರಚಿಸುತ್ತ, ಆಡಿಸುವ ಸೂತ್ರದ ಪರಿ;*
*ಗುಹೇಶ್ವರಲಿಂಗ ನಿರಾಳಚೈತನ್ಯ.*
*– ಅಲ್ಲಮಪ್ರಭುಗಳು*

ಇಷ್ಟಲಿಂಗದ ಮೇಲೆ ದೃಷ್ಟಿನೆಟ್ಟಸಾಧಕನಿಗೆ ಲಿಂಗವು ಜಗದಗಲ ಮುಗಿಲಗಲವಾಗಿ ಗೋಚರಿಸಿದಾಗ ಅಂಗದ ಕಣ್ಣಿನ ಕಪ್ಪುಗುಡ್ಡೆಯು ಇಷ್ಟಲಿಂಗದೊಂದಿಗೆ ಸಂಗಮವಾಗುತ್ತದೆ, ಆಗ ಕಾಣುವ ನೋಟವೆಲ್ಲ ಲಿಂಗನೋಟವಾಗಿರುತ್ತದೆ. ನಾಟಕದೊಳಗಿನ ನಾಟಕದಂತೆ ಜಗದ ಚಾಲನಾ ಸೂತ್ರವೇ ಕೈವಶವಾದಾಗ ಗುಹೇಶ್ವರಲಿಂಗದ ನಿಜ ಚೈತನ್ಯವು ನಿರಾಳವಾಗಿರುವುದು ಗೋಚರಿಸುತ್ತದೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ಜೆಜೆಎಂ ಕಾಮಗಾರಿಗೆ ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಭೂಮಿಪೂಜೆ

## ಕಲಕೇರಿ ಹೋಬಳಿಗಾಗಿ ನಿರಂತರ ಪ್ರಯತ್ನ :ಶಾಸಕ ರಾಜುಗೌಡ

**ಉದಯರಶ್ಮಿ ನ್ಯೂಸ್**

ಕಲಕೇರಿ: ಹೆಚ್ಚುತ್ತಿರುವ ಜನಸಂಖ್ಯೆಯೊಂದಿಗೆ ಕುಡಿಯುವ ನೀರಿನ ಸಮಸ್ಯೆಯೂ ಹೆಚ್ಚಾಗುತ್ತಿದೆ. ಈ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಸರಕಾರ ಪ್ರತಿ ಹಳ್ಳಿಗಳ ಪ್ರತಿಯೊಂದು ಮನೆಮನೆಗೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಸದುದ್ದೇಶದಿಂದ ಜಲಜೀವನ ಮಿಷನ್ ಯೋಜನೆ ಜಾರಿಗೆ ತಂದಿದ್ದು, ಈ ಯೋಜನೆಯಡಿ ಕಲಕೇರಿ ಗ್ರಾಮಕ್ಕೆ ಅಂದಾಜು 3 ಕೋಟಿ 52 ಲಕ್ಷ ರೂ.ಗಳ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ್ದು, ಗ್ರಾಮಸ್ಥರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ ಕುದರಿಸಾಲೊಡಗಿ ಹೇಳಿದರು.

ರವಿವಾರ ಸಂಜೆ ನಡೆದ ಭಾರತ ಸರಕಾರ, ಕರ್ನಾಟಕ ಸರಕಾರ, ಜಿಪಂ ವಿಜಯಪುರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ ಸಿಂದಗಿ ಇವರ 2022–23ನೇ ಸಾಲಿನ ಜಲಜೀವನ ಮಿಷನ್ ಯೋಜನೆ ಅಡಿಯಲ್ಲಿ ಮನೆಮನೆಗೆ ನಳ ಸಂಪರ್ಕ ಯೋಜನೆ ಕಾಮಗಾರಿಗೆ ಗ್ರಾಮದ ಶ್ರೀಗುರು ವೀರಘಂಟೈ ಮಡಿವಾಳೇಶ್ವರ ದೇವಸ್ಥಾನದ ಹತ್ತಿರ ಭೂಮಿಪೂಜೆ ನೆರವೇರಿಸಿ ನಂತರ ಮುಖ್ಯಬಜಾರದಲ್ಲಿ ನಡೆದ ಸಮಾರಂಭಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಬಹಳಷ್ಟು ಕಡೆ ಕುಡಿಯುವ ನೀರಿನ ಸಮಸ್ಯೆ, ರಸ್ತೆಗಳ ಕೊರತೆಯಿದ್ದು, ಅವೆಲ್ಲವುಗಳನ್ನು ಸರಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವೆ. ಕಲಕೇರಿಯನ್ನು ಹೋಬಳಿ ಎಂದು ಘೋಷಿಸಲು ಈ ಭಾಗದ ಜನರ ಹಲವು ವರ್ಷಗಳ ಬೇಡಿಕೆಯಾಗಿದ್ದು, ಈಗಾಗಲೇ ಕಂದಾಯ ಸಚಿವರ ಗಮನಕ್ಕೆ ತರಲಾಗಿದ್ದು, ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚೆ ಮಾಡಲಾಗಿದ್ದು, ಈ ಕುರಿತು ನಿರಂತರ ಪ್ರಯತ್ನ ನನ್ನದಾಗಿರುತ್ತದೆ ಎಂದರು.

ಇದೇ ವೇಳೆ ಜೆಜೆಎಂ ಗುತ್ತಿಗೆದಾರರಿಗೆ ಖಡಕ್ ಸೂಚನೆ ನೀಡಿ, ಗುಣಮಟ್ಟದ ಕಾಮಗಾರಿಯನ್ನು ಕೈಕೊಳ್ಳುವುದರ ಜೊತೆಗೆ ಪ್ರತಿ ಮನೆಗೆ ನೀರಿನ ಸರಿಯಾದ ವ್ಯವಸ್ಥೆ ಕಲ್ಪಿಸುವಂತೆ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ನೀಡಿದರು.



ಕಾರ್ಯಕ್ರಮದ ಸಾನಿಧ್ಯವಹಿಸಿದ ಹಿರೇಮಠದ ಸಿದ್ಧರಾಮ ಶಿವಾಚಾರ್ಯರು ಮತ್ತು ಶಾಂತಗೌಡ ಪಾಟೀಲ, ಗ್ರಾಪಂ ಸದಸ್ಯ ನಬಿಲಾಲ ನಾಯ್ಕೋಡಿ ಮಾತನಾಡಿದರು.

ಈ ವೇಳೆ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳು ಶಾಸಕರನ್ನು ಗೌರವಿಸಿ ಸನ್ಮಾನಿಸಿದರು.

ಗ್ರಾಪಂ ಅಧ್ಯಕ್ಷ ರಾಜಹಮ್ಮದ ಸಿರಸಗಿ, ಮಡುಸಾವಕಾರ ಬಿರಾದಾರ, ಸಂಗಾರಡ್ಡಿ ದೇಸಾಯಿ, ವ್ಹಿ.ಆರ್. ಝಳಕಿ, ಮಲಕಾಜಪ್ಪಗೌಡ ಬಿರಾದಾರ, ಸಾಯಬಣ್ಣ ಬಾಗೇವಾಡಿ, ಗುತ್ತಿಗೆದಾರ ಅಶೋಕ ಸಾಲಿಮಠ ಸೇರಿದಂತೆ ಇತರರು ಇದ್ದರು.

# ಜ.19ರಂದು ಸಿಂದಗಿ ಸಂಗಮೇಶ್ವರ ರಥೋತ್ಸವ

**ಉದಯರಶ್ಮಿ ನ್ಯೂಸ್**



ಸಿಂದಗಿ: ಪಟ್ಟಣದ ಶ್ರೀ ಸಂಗಮೇಶ್ವರ ದೇವರ ಜಾತ್ರಾಮಹೋತ್ಸವ ಅಂಗವಾಗಿ ಜ.19 ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಶ್ರೀ ಸಂಗಮೇಶ್ವರ ಹಾಗೂ ಭ್ರಮರಾಂಬಿಕಾ ದೇವಿಯ ಉತ್ಸವ ಮೂರ್ತಿಗಳ ರಥೋತ್ಸವ ಮತ್ತು ಪಲ್ಲಕ್ಕಿ ಉತ್ಸವ ಜರಗುತ್ತದೆ. ರಥೋತ್ಸವ ಮತ್ತು ಪಲ್ಲಕ್ಕಿ ಉತ್ಸವವು ದೇವಸ್ಥಾನದಿಂದ ಹೊರಟು ನೀಲಗಂಗಾದೇವಿ ದೇವಸ್ಥಾನ ಮಾರ್ಗವಾಗಿ ಹಳೆಬಜಾರದಲ್ಲಿನ ಶ್ರೀ ಬಸವಣ್ಣ ದೇವಸ್ಥಾನದವರೆಗೆ ಸಾಗಿ ಪುನಃ ಅದೇ ಮಾರ್ಗವಾಗಿ ದೇವಸ್ಥಾನ ತಲಪುವುದು ಎಂದು ದೇವಸ್ಥಾನದ ಕಮಿಟಿ ಸದಸ್ಯರು ತಿಳಿಸಿದ್ದಾರೆ.

ದೇವಸ್ಥಾನದ ಹಿನ್ನಲೆ: ಐತಿಹಾಸಿಕ ಸಂಗಮೇಶ್ವರ ದೇವಸ್ಥಾನ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಿತವಾಗಿದೆ. ಗರ್ಭಗುಡಿಯ ಮೇಲೆ ಕದಂಬ ನಾಗರ ಶೈಲಿಯ ಶಿಖರವಿದೆ. ದೇವಾಲಯದ ಎದುರು ನಿರ್ಮಿಸಿರುವ ಮಂಟಪದಲ್ಲಿ ಶಿವಲಿಂಗಗಳು ಮತ್ತು ನಂದಿಶಿಲ್ಪ ಕಲಾಕೃತಿಗಳಿವೆ. ದೇವಾಲಯದ ಹಿಂಬದಿ ಭ್ರಮರಾಂಬಿಕಾ ಗುಡಿ ಇದೆ. ದೇವಸ್ಥಾನದ ಸುತ್ತಲೂ ವಿಶಾಲವಾದ ಒಳಾಂಗಣ ಇದ್ದು ಇಲ್ಲಿ ಗಣಪತಿ, ಹಿರಿಯೊಡೆಯ ಮಳೆ ಸಂಗಪ್ಪ, ನರಸಿಂಹ ಮತ್ತು ಭನಶಂಕರಿಯ ಚಿಕ್ಕ ಚಿಕ್ಕ ಗುಡಿಗಳಿವೆ. ಒಳ ಗೋಡೆಗೆ ಹೊಂದಿಕೊಂಡಂತೆ ಪಾರ್ವತಿ, ಭೈರವ, ನಾಗ ನಾಗಿಣಿ ಮೊದಲಾದ ವಿಜಯನಗರೋತ್ತರ ಶೈಲಿಯ ಶಿಲ್ಪಗಳಿವೆ.

# ಧರ್ಮ–ಸಂಸ್ಕಾರ ಉಣಬಡಿಸುವ ಮಠ–ಮಂದಿರಗಳು :ವಾರದ

**ಉದಯರಶ್ಮಿ ನ್ಯೂಸ್**



ಸಿಂದಗಿ: ಭಗವಂತನ ಸೇವೆಯನ್ನು ನಿಸ್ವಾರ್ಥ ಭಾವದಿಂದ ಮಾಡಿದಾಗ ಮಾತ್ರ ಆ ದೇವರು ಒಳ್ಳೆಯ ಮಾರ್ಗ ತೋರುತ್ತಾನೆ ಎಂದು ತಾಲೂಕು ದಂಡಾಧಿಕಾರಿ ಪ್ರದೀಪಕುಮಾರ ಹಿರೇಮಠ ಹೇಳಿದರು.

ಭಾನುವಾರದಂದು ಪಟ್ಟಣದ ಬಸ್‌ಡಿಪೋ ಬಳಿಯಿರುವ ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದಲ್ಲಿ ಶ್ರೀ ಆದಿಶೇಷ ಸಂಸ್ಥಾನ ಹಿರೇಮಠದ 28ನೆಯ ಜಾತ್ರಾ ಮಹೋತ್ಸವ–ಧರ್ಮಸಭೆ ಕಾರ್ಯಕ್ರಮ ಹಾಗೂ ಯಡಿಯೂರು ಶ್ರೀ ಸಿದ್ದಲಿಂಗೇಶ್ವರ ಪುರಾಣ ಪ್ರವಚನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಾನವ ಆದ್ಯಾತ್ಮಿಕ ಜ್ಞಾನವನ್ನು ರೂಢಿಸಿಕೊಳ್ಳಬೇಕು. ತಿಳುವಳಿಕೆಗಾಗಿ ಇಂತಹ ಪುರಾಣ ಪ್ರವಚನ ಸಂತ್ಸಂಗಗಳನ್ನು ಆಲಿಸಬೇಕು. ಈ ಮಾನವ ಜನ್ಮ ಬಲು ದೊಡ್ಡದು ಮತ್ತು ಅಪೂರ್ವವಾಗಿದೆ. ಶರಣರ, ಸಂತರ, ಮಹಾಂತರ ಜೀವನ ಚರಿತ್ರೆಗಳನ್ನು ಅರಿತುಕೊಂಡು ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದರು.

ಈ ವೇಳೆ ಕಾರ್ಯಕ್ರಮದ ಅತಿಥಿ ಸ್ಥಾನವನ್ನು ಅಲಂಕರಿಸಿದ ಡಾ.ವಿಜಯಕುಮಾರ ವಾರದ ಮಾತನಾಡಿ, ನಮ್ಮ ಈ ಬದುಕು ನೀರಿನ ಮೇಲಿನ ಗುಳ್ಳೆ ಇದ್ದಹಾಗೆ. ಆದ್ಯಾತ್ಮಿಕ ಜೀವನ ಕೌಶಲ್ಯಗಳ ಬಗ್ಗೆ ಇಂದಿನ ಪೀಳಿಗೆಯಲ್ಲಿ ಅರಿವು ಮೂಡಿಸುವುದು ಅವಶ್ಯಕ. ಮಾನವ ಸಂಸಾರದ ಸಂಪತ್ತಿಗೆ ಅತೀ ಆಸೆ ಪಡದೆ, ಧರ್ಮ, ಸಂಸ್ಕಾರ ಉಣಬಡಿಸುವ ಮಠ–ಮಂದಿರಗಳಲ್ಲಿ ನಡೆಯುವ ಪುರಾಣ–ಪ್ರವಚನಗಳಲ್ಲಿ ಭಾಗವಹಿಸುವ ಮುಖಾಂತರ ಬದುಕು ಸಾರ್ಥಕಗೊಳಿಸಿಕೊಳ್ಳಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾದನ ಹಿಪ್ಪರಗಾ ಶ್ರೀಮಠದ ಶಾಂತವೀರ ಶಿವಾಚಾರ್ಯರು ಆಶೀರ್ವದಿಸಿದರು. ಸಾನಿಧ್ಯವನ್ನು ನಾಲವಾರ ಶ್ರೀಮಠದ ಶಿವಯೋಗಿ ಡಾ.ಚಂದ್ರಶೇಖರ ಸ್ವಾಮಿಗಳು ವಹಿಸಿದ್ದರು. ಕಾರ್ಯಕ್ರಮದ ನೇತೃತ್ವವನ್ನು ಸಿಂದಗಿ ಆದಿಶೇಷ ಶ್ರೀಮಠದ ನಾಗರತ್ನ ರಾಜಯೋಗಿ ವೀರರಾಜೇಂದ್ರ ಸ್ವಾಮಿಗಳು ವಹಿಸಿಕೊಂಡಿದ್ದರು.

ಪೂಜಾ ಹಿರೇಮಠ ನಿರೂಪಿಸಿದರು. ಪಂಡಿತ ಯಂಪೂರೆ ಸ್ವಾಗತಿಸಿದರು. ಮಹಾಂತೇಶ ನೂಲಾನವರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪಂಚಮಸಾಲಿ ಸಮಾಜದ ತಾಲೂಕಾಧ್ಯಕ್ಷ ಎಂ.ಎಂ. ಹಂಗರಗಿ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ, ಸತೀಶ ಬಿರಾದಾರ, ಭೋಜಪಗೌಡ ಬಿರಾದಾರ, ಗೊಲ್ಲಾಳಪ್ಪ ಬಗಲಿ, ಪ್ರವಚನಕಾರ ವೆ.ಮೂ.ಸಿದ್ದಯ್ಯ ಶಾಸ್ತ್ರಿಗಳು, ಸಂಗೀತಗಾರ ಶಾಂತಲಿಂಗ ಹೊನ್ನಕಿರಣಗಿ, ತಬಲಾ ಆಕಾಶ ಹೈದ್ರಾ, ಮಹಾಂತೇಶ ನಾಗೋಜಿ, ಆನಂದ ಶಾಬಾದಿ, ಚಂದ್ರಶೇಖರ ನಾಗರಬೆಟ್ಟ, ಮಲ್ಲನಗೌಡ ಪಾಟೀಲ ಇಬ್ರಾಹಿಂಪೂರ, ಭೋಜರಾಜ ದೇಸಾಯಿ, ಗುರು ಮಠ, ಸುದರ್ಶನ ಜಂಗಣ್ಣಿ, ವಿದ್ಯಾ ಚೌಕಿಮಠ, ಸಂಗನಗೌಡ ಪಾಟೀಲ ಅಗಸಬಾಳ, ಶಾಂತವೀರ ಹಿರೇಮಠ, ಸಿದ್ದಲಿಂಗ ಕಿಣಗಿ, ಸುರೇಶ ಭಜಂತ್ರಿ ಸೇರಿದಂತೆ ಶ್ರೀಮಠದ ಭಕ್ತರು ಇದ್ದರು.

## ಅದ್ದೂರಿ ಪಲ್ಲಕ್ಕಿ ಉತ್ಸವ । 150 ಹಂಡೆ ರುಚಿಕಟ್ಟಾದ ಬಜ್ಜಿ ಪಲ್ಯೆ ತಯಾರಿಕೆ

# ಆಹೇರಿ ಗಂಗಾಧರೇಶ್ವರ ಜಾತ್ರಾಮಹೋತ್ಸವ ಸಂಪನ್ನ

**ಉದಯರಶ್ಮಿ ನ್ಯೂಸ್**



ಸಿಂದಗಿ: ತಾಲೂಕಿನ ಆಹೇರಿ ಗ್ರಾಮದಲ್ಲಿರುವ ಗಂಗಾಧರೇಶ್ವರರ ಜಾತ್ರೆ ಪ್ರತಿವರ್ಷದಂತೆ ಈ ವರ್ಷವೂ ಸಂಕ್ರಮಣದ ದಿನವೇ ಸೋಮವಾರ ಭಕ್ತರ ದರ್ಶನದಿಂದ ಜಾತ್ರೆ

ವಿಜೃಂಭಣೆಯಿಂದ ನಡೆಯಿತು.

ತಾಲೂಕಿನ ಆಹೇರಿ ಗ್ರಾಮದಲ್ಲಿರುವ ಗಂಗಾಧರೇಶ್ವರ ದೇವಸ್ಥಾನಕ್ಕೆ ಪಲ್ಲಕ್ಕಿಯುನ್ನು ಜಯಘೋಷಗಳನ್ನು ಕೂಗುತ್ತಾ ಸ್ವಾಗತಿಸಲಾಯಿತು. ಬಳಿಕ ಅಗ್ಗಿ ಹಾಯುವ ಕಾರ್ಯ ಜರುಗಿತು. ದೇವಸ್ಥಾನದ ಆವರಣದಲ್ಲಿ ಚರಗ ಚೆಲ್ಲಿ ರೈತನ ಸಿರಿ ಸಮೃದ್ಧಿಗೆ ಪ್ರಾರ್ಥನೆ ಸಲ್ಲಿಸಲಾಯಿತು. ಈ ಬಾರಿ 150 ಹಂಡೆಯ ಬಜ್ಜಿ ಪಲ್ಯೆ ಮಾಡಲಾಯಿತು.

ಗುರು ಶಿಷ್ಯರ ಬಾಂಧವ್ಯಕ್ಕೆ ಸಾಕ್ಷಿಯಾದ ಭಕ್ತರು:

ಈ ಜಾತ್ರೆಯ ವಿಶೇಷವೆಂದರೆ ವಿವಿಧ ಧಾನ್ಯಗಳಿಂದ ತಯಾರಿಸಿದ ಭಜ್ಜಿ ಪಲ್ಯೆ ಮತ್ತು ರೊಟ್ಟಿಗೆ ಭಕ್ತರೆಲ್ಲರೂ ಬಾಯಿ ಚಪ್ಪರಿಸಿ ಪ್ರಸಾದ ರೂಪದಲ್ಲಿ ಸ್ವೀಕರಿಸಿ ಮಲ್ಲಯ್ಯನ ಏಳ ಕೋಟೆ ಏಳು ಕೋಟೆಯ ಉಗೆ ಎಂದು ಗಂಗಾಧರೇಶ್ವರ ಕೃಪೆಗೆ ಪಾತ್ರರಾಗುತ್ತಾರೆ.

ಕಮಿಟಿಯ ಭಾಗಪ್ಪಗೌಡ ಪಾಟೀಲ, ಶಾಂತಗೌಡ ಬಿರಾದಾರ, ಗಂಗಾಧರ ಚಿಂಚೊಳ್ಳಿ, ರಮಜಾನಸಾಬ ದುಮ್ಮದ್ರಿ, ಗೌಡಪ್ಪಗೌಡ ಪಾಟೀಲ, ಸಿದ್ದು ಕಡಗಂಚಿ, ಬಸಣ್ಣಸಾಹು ಕಡಗಂಚಿ, ಶಿವಾನಂದ ಪೀರಶೆಟ್ಟಿ, ಗಂಗಣ್ಣ ಸೇರಿದಂತೆ ಇತರರು ಜಾತ್ರೆಯ ನೇತೃತ್ವವನ್ನು ವಹಿಸಿಕೊಂಡಿದ್ದರು.

ಜಾತ್ರಾ ಮಹೋತ್ಸವದಲ್ಲಿ ಶಾಸಕ ಅಶೋಕ ಮನಗೂಳಿ, ಮಾಜಿ ಶಾಸಕ ಶರಣಪ್ಪ ಸುಣಗಾರ, ಯಶವಂತ್ರಾಯಗೌಡ ರೋಗಿ, ಲಿಂಬೆ ಅಬಿವೃದ್ಧಿ ನಿಗಮ ಮಂಡಳಿ ಮಾಜಿ ಅಧ್ಯಕ್ಷ ಅಶೋಕ ಅಲ್ಲಾಪೂರ, ಎಂ.ಎಂ.ಹಂಗರಗಿ, ಪಂಡಿತ ಯಂಪುರೆ, ವಾಯ್.ಸಿ. ಮಯೂರ, ಮಹಾಂತಗೌಡ ಬಿರಾದಾರ, ಸಿದ್ದಲಿಂಗ ಚೌಧರಿ ಸೇರಿದಂತೆ ವಿವಿಧ ತಾಲೂಕಿನ, ಜಿಲ್ಲೆಯ ಮತ್ತು ರಾಜ್ಯದ ಭಕ್ತರು ಭಾಗವಹಿಸಿ ಗುರುವಿನ ದರುಶನ ಪಡೆದು ಕೃತಾರ್ಥರಾದರು.

# ಉದ್ಯೋಗ ಖಾತರಿ ಯೋಜನೆ ಗ್ರಾಮಾಭಿವೃದ್ಧಿಗೆ ಸಹಕಾರಿ



**ಉದಯರಶ್ಮಿ ನ್ಯೂಸ್**

ಇಂಡಿ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು ಗ್ರಾಮದ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಇಂಗಳಗಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿದ್ರಾಯ ಸಿನಿಖೇಡ ಅವರು ಹೇಳಿದರು.

ತಾಲೂಕಿನ ಇಂಗಳಗಿ ಗ್ರಾಮದ ಶ್ರೀ ಹನುಮಾನ ದೇವಸ್ಥಾನ ಆವರಣದಲ್ಲಿ ನಡೆದ ಗ್ರಾಮ ಪಂಚಾಯತಿಯ 2024–25ನೇ ಸಾಲಿನ ನರೇಗಾ ಯೋಜನೆಯಡಿ ಕ್ರಿಯಾ ಯೋಜನೆ ತಯಾರಿಸುವ ಕುರಿತು ನಡೆದ ಗ್ರಾಮ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಗ್ರಾಮ ಸಭೆ ಪೂರಕವಾಗಿದೆ. ನರೇಗಾ ಯೋಜನೆಯಡಿಯಲ್ಲಿ ಸಿಗುವ ವೈಯಕ್ತಿಕ ಕಾಮಗಾರಿಗಳಾದ ಕೃಷಿಹೊಂಡ, ಬದು ನಿರ್ಮಾಣ, ಜಾನುವಾರು ಶೆಡ್, ಮೇಕೆ ಶೆಡ್, ಇಂಗು ಗುಂಡಿ ಸೇರಿದಂತೆ ಇನ್ನಿತರ ಸೌಲಭ್ಯಗಳ ಬಗ್ಗೆ ಗ್ರಾಮ ಪಂಚಾಯತಿಗೆ ಬೇಡಿಕೆ ಸಲ್ಲಿಸುವಂತೆ ತಿಳಿಸಿದರು.

ಪಂಚಾಯತಿ ಅಧ್ಯಕ್ಷೆ ಲಕ್ಷ್ಮಿಬಾಯಿ ಶಿ ದಶವಂತ, ಗ್ರಾಮ ಪಂಚಾಯತಿ ಕಾರ್ಯದರ್ಶಿ ಹಸೀನಾ ನೆಗಿನಾಳ, ಬಿಲ್ ಕಲೆಕ್ಟರ್ ಗುರಪ್ಪ ಹಕ್ಕಿ, ಕಾಯಕ ಮಿತ್ರರಾದ ಮಂಗಲ ರಾಹುಲ್ ಉತ್ತರೆ ಗ್ರಾಮಸ್ಥರು ಹಾಗೂ ಸದಸ್ಯರಾದ ಪೈಗಂಬರ್ ಮನೂರ, ಸುನೀಲ ದಶವಂತ, ಯಲಪ್ಪ ಪೂಜಾರಿ, ಶಿವಾನಂದ ಶಿವಗದ್ದಗಿ, ಬೇಬಿ ರಾಠೋಡ, ಚಿಮಾಜ್ಜಿ ಥೋರಾತ, ರಾಜಕುಮಾರ ಜಾಧವ, ರೇವಣಸಿದ್ದ ಕುಂಬಾರ, ವಜೀರ್ ಪಟೇಲ, ಶಿವಪುತ್ರ ಬೆನಕನಹಳ್ಳಿ, ಹಣಮಂತ ಜಮಾದಾರ, ಶ್ರೀಮಂತ ಕಾಂಬಳೆ, ರಾಮ ಬಾರಾಣಿ, ಸಿದ್ದು ಬಿರಾದಾರ, ಮಾದೇವ ಅಳಗಿ ಸೇರಿದಂತೆ ಇಂಗಳಗಿ ಹಾಗೂ ಮಾವಿನಹಳ್ಳಿ ಗ್ರಾಮಸ್ಥರು ಭಾಗವಹಿಸಿದ್ದರು.




# ಶರಣರ ತತ್ವಾದರ್ಶ ಅಳವಡಿಸಿಕೊಳ್ಳಿ :ಮನಗೂಳಿ

**ಉದಯರಶ್ಮಿ ನ್ಯೂಸ್**




ಸಿಂದಗಿ: ಜಗತ್ತಿನ ಮೂಲ ಇಂಜನಿಯರ್ಸ್ ಸೊನ್ನಲಗಿ ಸಿದ್ಧರಾಮೇಶ್ವರರ ವಂಶಸ್ಥರ ಭೋವಿ ವಡ್ಡರ ಜನಾಂಗವಾಗಿದೆ. ಇವರ ಮೂಲ ಕಸಬು ಮಣ್ಣು ಹೊರುವುದು, ಕಲ್ಲು ಒಡೆಯುವುದು. ಅದಕ್ಕೆ ಪ್ರಪಂಚದ ಉಗಮವಾಗುವಲ್ಲಿ ಭೋವಿಗಳ ಪಾತ್ರ ಹಿರಿಮೆಯಾದದ್ದು ಎಂದು ಸಿ.ಎಂ. ಮನಗೂಳಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಅರವಿಂದ ಮನಗೂಳಿ ಹೇಳಿದರು.

ಪಟ್ಟಣದ ತಾಲೂಕು ಆಡಳಿತ ಸೌಧದ ಕಾರ್ಯಾಲಯದಲ್ಲಿ ತಾಲೂಕು ಆಡಳಿತ ಹಮ್ಮಿಕೊಂಡ ಶಿವಯೋಗಿ ಸಿದ್ಧರಾಮೇಶ್ವರ ಜಯಂತ್ಯೋತ್ಸವ ಸಮಾರಂಭದಲ್ಲಿ ಅವರು ಉಪನ್ಯಾಸ ನೀಡಿ, ನಾವೆಲ್ಲರೂ ಭೋವಿ ಜನಾಂಗದವರ ಕಾಯಕವನ್ನು ಕೀಳರಿಮೆಯಿಂದ ನೋಡದೇ ನಾವೆಲ್ಲ ಭೋವಿಗಳು ಎಂದು ಎದೆ ತಟ್ಟಿ ಹೇಳಬೇಕಲ್ಲದೇ ಮೂಲ ಕಸಬನ್ನು ಮರೆಯಬಾರದು ಎಂದರು.

ಹನ್ನೆರಡನೇ ಶತಮಾನದ ಜಗಜ್ಯೋತಿ ಬಸವೇಶ್ವರರು ಹಾಗೂ ಸಿದ್ಧರಾಮೇಶ್ವರರು ಶ್ರೇಷ್ಠ ವಚನಕಾರರಾಗಿದ್ದರು. ಅಂತೆಯೆ ಎಲ್ಲ ಶರಣರು ಅವರನ್ನು ಅಪ್ಪಿಕೊಂಡಿದ್ದರು. ಇಂತಹ ಮಹಾನ್ ವ್ಯಕ್ತಿಗಳ ತತ್ವಾದರ್ಶಗಳನ್ನು ನಾವೆಲ್ಲರೂ ಮೈಗೂಡಿಕೊಂಡಾಗ ಮಾತ್ರ ಜಯಂತಿ ಆಚರಿಸಿದ್ದಕ್ಕೆ ಸಾರ್ಥಕವಾಗುತ್ತದೆ ಎಂದರು.

ಈ ವೇಳೆ ಕಸಾಪ ನಿಕಟಪೂರ್ವ ಅಧ್ಯಕ್ಷ ರಾಜಶೇಖರ ಕೂಚಬಾಳ ಮಾತನಾಡಿ, ಬಸವಣ್ಣನವರ ಅನುಭವ ಮಂಟಪದಲ್ಲಿ ಮೂರನೇ ಪೀಠಾಧ್ಯಕ್ಷರಾಗಿ ಕಾರ್ಯನಿರ್ವಹಿಸಿ ಮನುಜ ಮನುಕುಲಕ್ಕೆ ಉದ್ಧಾರ ಮಾಡದೇ ಪ್ರಾಣಿ, ಪಶು ಪಕ್ಷಿಗಳಿಗಾಗಿ ಅರವಟ್ಟಿಗಳನ್ನು ನಿರ್ಮಿಸಿ ಚೆನ್ನಬಸವಣ್ಣನವರ ಪರಮ ಶಿಷ್ಯರಾಗಿ ಸಾಮಾಜಿಕವಾಗಿ ವಚನಗಳ ಮೂಲಕ ಉದ್ಧಾರ ಮಾಡಿದ್ದಾರೆ ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ತಾಲೂಕು ದಂಡಾಧಿಕಾರಿ ಪ್ರದೀಪಕುಮಾರ ಹಿರೇಮಠ ಮಾತನಾಡಿದರು.

ವೇದಿಕೆಯ ಮೇಲೆ ಪಂಚಮಸಾಲಿ ಸಮಾಜದ ಅಧ್ಯಕ್ಷ ಎಂ.ಎಂ.ಹಂಗರಗಿ, ಲಿಂಬೆ ಅಭಿವೃದ್ಧಿ ಮಂಡಳಿ ಮಾಜಿ ಅದ್ಯಕ್ಷ ಅಶೋಕ ಅಲ್ಲಾಪುರ, ಕೃಷಿ ಅದಿಕಾರಿ ಡಾ.ಎಚ್.ವೈ.ಸಿಂಗೆಗೋಳ, ಸರಕಾರಿ ನೌಕರರ ಸಂಘದ ಅದ್ಯಕ್ಷ ಅಶೋಕ ತೆಲ್ಲೂರ, ಭೋವಿ ಸಮಾಜದ ತಾಲೂಕಾದ್ಯಕ್ಷ ಪಂಡಿತ ಯಂಪೂರೆ, ಸುನಂದಾ ಯಂಪುರೆ ವೇದಿಕೆ ಮೇಲಿದ್ದರು.

ಕಂದಾಯ ಇಲಾಖೆಯ ಆರ್.ಎ.ಮಕಾಂದಾರ, ಜಿ.ಎಸ್.ರೋಡಗಿ, ಇಂದ್ರಾಬಾಯಿ ಬಳಗಾನೂರ, ಎಸ್.ಎಂ.ತಾರನಾಳ, ಕಾನಿಪ ಅಧ್ಯಕ್ಷ ಆನಂದ ಶಾಬಾದಿ, ಸೈನಾಬಿ ಮಸಳಿ, ವರ್ಷಾ ಪಾಟೀಲ, ಶ್ರೀನಿವಾಸ ಓಲೇಕಾರ, ಸಾಯಬಣ್ಣ ದೇವರಮನಿ, ಕೊಳ್ಳಪ್ಪ ಚಾಕರೆ, ಭೀಮಾಶಂಕರ ಯಂಪೂರೆ, ದಿಲೀಪ ಆಲಕುಂಟೆ, ಭೀಮಣ್ಣ ಬಂಡಿವಡ್ಡರ, ರವಿ ಚಾಕರೆ, ತಿರುಪತಿ ಬಂಡಿವಡ್ಡರ, ರವಿ ವಡ್ಡರ, ಮುತ್ತು ಆಲಕುಂಟೆ, ಪ್ರವೀಣ ಯಂಪೂರೆ, ಪರಶುರಾಮ ಯಂಪೂರೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಜ್ಞಾನ ಭಾರತಿ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಪಂಡಿತ ಯಂಪೂರೆ ಸ್ವಾಗತಿಸಿದರು. ಪ್ರಾಧ್ಯಾಪಕ ಮಹಾಂತೇಶ ನೂಲಾನವರ ನಿರೂಪಿಸಿದರು. ಸುನಂದಾ ಯಂಪೂರೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ಮುತ್ತಪ್ಪ ಪಾತ್ರೋಟಿ ವಂದಿಸಿದರು.

# ಅಖಂಡ ಭಾರತ ರೂಪತಾಳುವ ಸಮಯ ದೂರವಿಲ್ಲ :ಬೆಳ್ಳುಬ್ಬಿ

**ಉದಯರಶ್ಮಿ ನ್ಯೂಸ್**



ಕೊಲ್ಹಾರ: 1990 ರಲ್ಲಿ ದೇಶದ ಮಹಾನ್ ಮುತ್ಸದ್ದಿ ಎಲ್.ಕೆ.ಅಡ್ವಾನಿ ಅವರ ನೇತೃತ್ವದಲ್ಲಿ ಅಯೋದ್ಯೆಯಲ್ಲಿ ರಾಮಮಂದಿರ ಸ್ಥಾಪಿಸಿಯೇ ತೀರಬೇಕೆಂಬ ಕನಸನ್ನು ಹೊತ್ತು ಹೊರಟ ರಥ ಯಾತ್ರೆಯ ಸಂಚಾರ ದೇಶಾದ್ಯಂತ ಸಂಚರಿಸಿದ ಪ್ರತಿಫಲವಾಗಿ ಪ್ರಧಾನಿ ನರೇಂದ್ರ ಮೋದಿಯವರ ಹಾಗೂ ದೇಶದ ಅಸಂಖ್ಯಾತ ಹಿಂದೂಗಳ ತಪಸ್ಸಿನ ಸಂಕಲ್ಪ ಸಿದ್ದಿಯಾಗಿ ಜ.22ರಂದು ರಾಮಮಂದಿರ ಉದ್ಘಾಟನೆಯಾಗುತ್ತಿದೆ ಎಂದು ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಹೇಳಿದರು.

ಪಟ್ಟಣದಲ್ಲಿ ರಾಮಮಂದಿರ ಉದ್ಘಾಟನೆ ಸಮಾರಂಭದ ನಿಮಿತ್ಯವಾಗಿ ರಾಮಜನ್ಮಭೂಮಿ ಟ್ರಸ್ಟನವರು ಕಳುಹಿಸಿದ ಅಕ್ಷತೆಕಾಳು ಮತ್ತು ಕರಪತ್ರವನ್ನು ಮನೆ ಮನೆಗೆ ಮತ್ತು ಅಂಗಡಿಗಳಿಗೆ ತೆರಳಿ ವಿತರಣೆ ಮಾಡುವ ಸಂದರ್ಭದಲ್ಲಿ ಮಾತನಾಡಿದ ಅವರು, ಬರುವ ದಿನಗಳಲ್ಲಿ ಭಾರತಮಾತೆಯು ಅಖಂಡ ಭಾರತವಾಗಿ ರೂಪತಾಳುವ ಸಮಯ ಬರುವದು ಬಹಳ ದೂರವಿಲ್ಲ ಎಂದರು.

ಪ್ರಧಾನಿ ನರೇಂದ್ರ ಮೋದಿಯವರು ಕರೆಕೊಟ್ಟ ಪ್ರಕಾರ ಉದ್ಘಾಟನಾ ಸಮಾರಂಭದ ದಿನದಂದು ಪ್ರತಿಯೊಬ್ಬರು ರಾಮಭಜನೆ ಮಾಡುತ್ತಾ ಊರಿನ ಮನೆ ಮನೆಗಳ ಮುಂದೆ ದೀಪಗಳನ್ನು ಹಚ್ಚಿ ಆಕಾಶಬುಟ್ಟಿಯನ್ನು ಹಾರಿಸಿ ಜೈ ಶ್ರೀರಾಮ ಎನ್ನುವ ಘೋಷಣೆ ಕೂಗುತ್ತಾ ಪ್ರತಿಯೊಬ್ಬ ಹಿಂದೂವಿನ ಕನಸು ನನಸಾದ ಸಂಭ್ರಮಾಚರಣೆಯನ್ನು ವಿಶ್ವವೇ ಬೆರಗಾಗುವಂತೆ ಆಚರಿಸುವ ದಿಸೆಯತ್ತ ನಾವೆಲ್ಲರೂ ಮುನ್ನುಗ್ಗುವಂತ ಸಮಯ ಇದಾಗಿದ್ದು ಸರ್ವರೂ ಪಾಲ್ಗೊಂಡು ವಿಶಿಷ್ಟ ರೀತಿಯಲ್ಲಿ ಆಚರಣೆ ಮಾಡಬೇಕು ಎಂದರು.

ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣದ ಕಡೆಗೆ ಕರ್ಕ ರಾಶಿಯಿಂದ ಮಕರ ರಾಶಿಗೆ ಸಂಚರಿಸುವ ಪರ್ವ ಕಾಲವೇ ಮಕರ ಸಂಕ್ರಮಣವಾಗಿದ್ದು ಇದು ರೈತರ ಪಾಲಿಗೆ ವರ್ಷದ ಮೊದಲ ಹಬ್ಬ ಅದರಂತೆ ಸರ್ವ ಜನರ ಪಾಲಿನ ಸಿಹಿ ತರುವ ಶುಭ ಸಂದರ್ಭ ನಾಡಿನ ಜನರಿಗೆ ಆಶಾದಾಯಕವಾಗಲಿ ಎಂದು ಶುಭಾಶಯವನ್ನು ಮಾಜಿ ಸಚಿವ ಎಸ್.ಕೆ.ಬೆಳ್ಳುಬ್ಬಿ ಹೇಳಿದರು.

ಈ ಸಂದರ್ಭದಲ್ಲಿ ಬಸಪ್ಪ ಕೊಠಾರಿ, ಕಲ್ಲಪ್ಪ ಗಿಡ್ಡಪ್ಪಗೋಳ, ದುಂಡಪ್ಪ ಮಂಟೂರ, ಸಿ.ಎಂ.ಗಣಕುಮಾರ, ಪುಂಡಲೀಕ ಕಂಬಾರ, ಶ್ರೀಶೈಲ ಗಿಡ್ಡಪ್ಪಗೋಳ, ವಿಜಯ ಬಾಟಿ, ಬಸಪ್ಪ ಗೂಗ್ಯಾಳ, ರಾಮಣ್ಣ ಉಪ್ಪಲದಿನ್ನಿ, ಈರಯ್ಯ ಕೂಡಗಿ, ನಾಗೇಂದ್ರ ಗಣಾಚಾರಿ, ವೀರಭದ್ರ ಬಾಗಿ, ಸೋಮಯ್ಯ ಮಠ, ನಾಮದೇವ ಪವಾರ, ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

# ಇಂಡಿ: ರಾಮ ರಕ್ಷಾಪಟಣ ದೀಪ ಹಂಚಿಕೆ



**ಉದಯರಶ್ಮಿ ನ್ಯೂಸ್**

ಇಂಡಿ: ಅಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಉದ್ಘಾಟನೆಯಾಗುತ್ತಿರುವ ಹಿನ್ನೆಲೆಯಲ್ಲಿ ಅಲ್ಲಿಂದ ತಂದಿದ್ದ ರಾಮ ರಕ್ಷಾಪಟಣ ದೀಪ ಪಟ್ಟಣದಲ್ಲಿ ಭಾನುವಾರ ವಿವೇಕ ಬಳಗದ ವತಿಯಿಂದ ರಾಮಭಕ್ತರು ಪ್ರತಿ ಮನೆಗೆ ತೆರಳಿ ಶ್ರದ್ದೆ ಭಕ್ತಿಯಿಂದ ವಿತರಿಸಿ ಭಕ್ತಿ ಭಾವ ಮೆರೆದರು.

ಪಟ್ಟಣದ ಓಂ ಶಾಂತಿ ಆಶ್ರಮದಲ್ಲಿ ವಿವೇಕ ಬಳಗದ ವತಿಯಿಂದ ಪೂಜೆ ಸಲ್ಲಿಸಿ, ಜೈ ಶ್ರೀ ರಾಮ್ ಘೋಷಣೆ ಮೊಳಗಿಸಿ, ರಾಮನ ಭಾವಚಿತ್ರ ಹಾಗೂ ರಾಮ ರಕ್ಷಾ ಪಟಣ ದೀಪ ಹಂಚಿಕೆ ಮಾಡಿದರು.

ಇದೇ ಸಂದರ್ಭದಲ್ಲಿ ವಿದ್ಯಾಶ್ರೀ ಪಾಟೀಲ ಮಾತನಾಡಿ, ಯೋಧ್ಯೆಯಲ್ಲಿ ಶ್ರೀ ರಾಮಮಂದಿರ ಉದ್ಘಾಟನೆಯಾಗುತ್ತಿರುವುದು ಇಡೀ ದೇಶ ಸಂತೋಷಪಡುವ ವಿಷಯವಾಗಿದೆ. ರಾಮ ರಕ್ಷಾಪಟಣ ದೀಪ ಪ್ರತಿಯೊಂದು ಮನೆಯಲ್ಲಿ ಬೆಳಗಲಿ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಬಿ.ಕೆ. ಯಮುನಾ ಅಕ್ಕ, ದ್ರಾಕ್ಷಾಯಣಿ, ಉಮಾ ಪಟ್ಟದಕಲ್ಲ, ಸಂಗಾ ಸಿಸ್ಟರ್ ಸೇರಿದಂತೆ ವಿವೇಕ ಬಳಗದ ಮಾತೆಯರು ಉಪಸ್ಥಿತ-ರಿದ್ದರು.

# ಶಿವಯೋಗಿ ಸಿದ್ಧರಾಮ ಪ್ರಥಮ ಶ್ರೇಣಿಯ ವಚನಕಾರರು

**ಉದಯರಶ್ಮಿ ನ್ಯೂಸ್**

ಇಂಡಿ: ಹನ್ನೆರಡನೆಯ ಶತಮಾನದ ಪ್ರಥಮ ಶ್ರೇಣಿಯ ವಚನಕಾರರಲ್ಲಿ ಒಬ್ಬ. ಬಾಲ್ಯದಲ್ಲಿ ಕುರಿಕಾಯುವ ಕಾಯಕ. ಶ್ರೀಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ ದರ್ಶನ ಪಡೆದ ಸಿದ್ದರಾಮ ಸೋಲಾಪುರಕ್ಕೆ ಬಂದು ದೇವಸ್ಥಾನ ನಿರ್ಮಿಸಿ ಕೆರೆ ಕಟ್ಟೆ ಕರ್‍ಯದಲ್ಲಿ ತೊಡಗಿದ ಕಾಯಕಯೋಗಿ ಎಂದು ಕಂದಾಯ ಉಪವಿಬಾಗಾಧಿಕಾರಿ ಅಬೀದ್ ಗದ್ಯಾಳ ಹೇಳಿದರು.



ಸೋಮವಾರ ಪಟ್ಟಣದ ಮಿನಿ ವಿಧಾನಸೌಧದಲ್ಲಿ ತಾಲೂಕಾ ಆಡಳಿತ ವತಿಯಿಂದ ನಡೆದ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಭುದೇವ ಅವರನ್ನು ಕಲ್ಯಾಣಕ್ಕೆ ಕರೆದೊಯ್ದು ಚೆನ್ನ ಬಸವಣ್ಣ ನವರಿಂದ ಇಷ್ಟಲಿಂಗ ದೀಕ್ಷೆ ಕೊಡಿಸಿ ಅನುಭವ ಮಂಟಪ ಗೋಷ್ಠಿಯಲ್ಲಿ ಪಾಲ್ಗೊಂಡು ಮಹಾಶಿವಯೋಗಿಯಾದರು ಎಂದರು.

ತಹಸೀಲ್ದಾರ ಬಿ.ಎಸ್. ಕಡಕಬಾವಿ, ಸಮಾಜ ಕಲ್ಯಾಣ ಅಧಿಕಾರಿ ಬಿ.ಜೆ. ಇಂಡಿ, ಕಜಾಪ ಅಧ್ಯಕ್ಷ ಆರ್.ವಿ. ಪಾಟೀಲ, ಪಿ.ಎಂ. ಮಠಪತಿ, ಎಂ.ಪಿ. ಕೊಡತೆ, ಎಸ್ ಆರ್. ಮುಜಗೊಂದ, ಶಿರಸ್ತೆದಾರ ಬಸವರಾಜ ರಾಹೂರ, ಬಸವರಾಜ ಗೊರನಾಳ ಮತ್ತಿತರಿದ್ದರು.

# ಶರಣರ ವಚನದ ಸಾರ ಅರಿಯಬೇಕು :ಎಡಿಸಿ ಮುರಗಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಮ ಸಮಾಜದ ಕನಸು ಹೊತ್ತು,ಆ ಮೂಲಕ ಸತ್ಯಪಥದಲ್ಲಿ ನಡೆದು, ತಮ್ಮ ವಚನಗಳ ಮೂಲಕ ಸಾಮಾನ್ಯ-ರಿಗೂ ತಿಳಿಯುವಂತೆ ಬರೆದಂತೆ, ನುಡಿದಂತೆ ನಡೆದು ಜನಸಾಮಾನ್ಯರಿಗೆ ಅರಿವಿನ ಗುರುವಾಗಿದ್ದವರು 12ನೇ ಶತಮಾನದ ಶರಣರು ಎಂದು ಅಪರ ಜಿಲ್ಲಾಧಿಕಾರಿ ಮಹದೇವ ಮುರಗಿ ಹೇಳಿದರು.



ಅವರು ಜಿಲ್ಲಾಡತ ಹಾಗೂ ವಿವಿಧ ಇಲಾಖೆಗಳ ಸಹಯೋಗದ ಮೂಲಕ ಸೋಮವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಶಿವಯೋಗಿ ಸಿದ್ಧರಾಮೇಶ್ವರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಗೌರವ ಸಲ್ಲಿಸಿ ಮಾತನಾಡಿದ ಅವರು, ಶಿವಯೋಗಿ ಸಿದ್ಧರಾಮೇಶ್ವರ ಕರ್ಮಯೋಗಿಯಾಗಿದ್ದ ಅವರು ಮುಂದೆ ಅಲ್ಲಮಪ್ರಭುಗಳ ಆಶಯದಂತೆ ಕಲ್ಯಾಣಕ್ಕೆ ತೆರಳಿ, ಶಿವಯೋಗಿ-ಜ್ಞಾನಯೋಗಿಯಾದರು. ಅವರು ಸೊನ್ನಲಾಪೂರದಲ್ಲಿ ಕೆರೆ ಕಟ್ಟೆಗಳನ್ನು ಕಟ್ಟಿಸುವ ಮೂಲಕ ಬಹು ದೊಡ್ಡ ಕಾಯಕ ಯೋಗಿಯಾದವರು. ಇವರ ವಚನಗಳು ಜ್ಞಾನದೊಂದಿಗೆ ಸಮಾಜದಲ್ಲಿನ ಅನಿಷ್ಟ ಪದ್ಧತಿಗಳ ತೊಡೆದು ಹಾಕಲು ವಚನದ ಸಾರ ಧ್ವನಿಸುತ್ತವೆ. ಇವರು ಸಮಾಜಕ್ಕೆ ಬಹು ದೊಡ್ಡ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಇವರ ವಚನಗಳ ತತ್ವ ಸಾರ ಅರಿತು ಸುಂದರತೆಯ ಬದುಕು ರೂಪಿಸಿಕೊಳ್ಳಲು ಈ ವಚನಗಳು ದಾರಿ ತೋರುತ್ತವೆ. ಇಂತಹ ಶರಣರು ಅಂದು ನುಡಿದ ನುಡಿ, ರಚಿಸಿದ ವಚನ ಇಂದಿಗೂ ಪ್ರಸ್ತುತ. ಜಯಂತಿ ಆಚರಣೆಯಿಂದ ಅವರು ಈ ಸಮಾಜ-ಕ್ಕೆ ನೀಡಿದ ಸಂದೇಶ ನೆನಪಿಸುವ ಮೂಲಕ ಅವರ ತತ್ವಾದರ್ಶದ ಪಥದಲ್ಲಿ ನಡೆಯುವುದೇ ಆಗಿದ್ದು ಉದ್ಧೇಶವೂ ಸಹ ಇದೆ ಆಗಿದೆ. ಈ ಸಮಾಜದ ಒಳಿತಿಗಾಗಿ ಸಹಾಯ ಸಹಕಾರ ಒದಗಿಸಬೇಕು.ಉತ್ತಮ ಜೀವನ ರೂಪಿಸಿಕೊಳ್ಳುವಲ್ಲಿಯೂ ಜ್ಞಾನಿಗಳ ನುಡಿ ದಾರದೀಪವಾಗಿವೆ. ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಅವರ ಕುರಿತಾಗಿ ತಿಳಿದುಕೊಳ್ಳಬೇಕು. ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ನಿವೃತ್ತ ಪ್ರಾಧ್ಯಾಪಕ ಬಿ.ಎನ್.ಪಾಟೀಲ ಅವರು ಶಿವಯೋಗಿ ಸಿದ್ಧರಾಮೇಶ್ವರ ಅವರ ಕುರಿತಾಗಿ ಮಾತನಾಡಿದರು. ಅಂದಿನ ಶರಣರು ಲಿಂಗಭೇದ, ಜಾತಿ ಭೇದ,ವರ್ಣಭೇದ ವಿಲ್ಲದ ಯಾವುದೇ ಭೇದ ವಿಲ್ಲದ ಎಲ್ಲರಿಗೂ ಸರಿಸಮಾನವಾದ ಅವಕಾಶಗಳನ್ನು ಕಲ್ಪಿಸಿದ್ದರು. ಕಾಯಕಯೋಗಿಗಳ, ಶ್ರಮಜೀವಿಗಳಾಗಿದ್ದ ಶರಣರು ಈ ಸತ್ಯದ ಪಥವ ತೋರಿದವರು.ಇವರು ಅದ್ಭುತವಾದ ಸುಮಾರು 1600ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ ಎಂದು ಹೇಳಿದರು.

ಬಸವರಾಜ ಎ ನಾಟೀಕಾರ ತಂಡ ಸಂಗೀತ ಕಾರ್ಯಕ್ರಮ ನಡಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋತೆ, ಮಹಾನಗರ ಪಾಲಿಕೆ ಸದಸ್ಯರಾದ ವಿಠ್ಠಲ ಹೊಸಪೇಟೆ, ವಿ.ಸಿ.ನಾಗಠಾಣ, ರಾಮು ಹೊಸಪೇಟೆ, ಅಡಿವೆಪ್ಪ ಸಾಲಗಲ್, ಭೀಮರಾಯ ಜಿಗಜಿಣಗಿ, ದೇವೇಂದ್ರ ಮೀರೇಕರ, ಎಚ್.ಮಮದಾಪೂರ ಉಪಸ್ಥಿತರಿದ್ದರು.

## ಮೆರವಣಿಗೆ

ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ಶಿವಯೋಗಿ ಸಿದ್ದರಾಮೇಶ್ವರ ಅವರ ಭಾವಚಿತ್ರದ ಮೆರವಣಿಗೆ ವಿವಿಧ ಕಲಾ ತಂಡಗಳೊಂದಿಗೆ ನಡೆಯಿತು.

# ಕುಳೇಕುಮಟಗಿ ಗ್ರಾಮದಲ್ಲಿ ಮಂತ್ರಾಕ್ಷತೆ ವಿತರಣೆ



**ಉದಯರಶ್ಮಿ ನ್ಯೂಸ್**

ಮೋರಟಗಿ: ಹಿಂದೂಗಳ ಆರಾಧ್ಯದೇವ ಶ್ರೀರಾಮಚಂದ್ರನ ಮೂರ್ತಿ ಪ್ರತಿಷ್ಠಾಪನೆ ದಿನವನ್ನು ದೀಪಾವಳಿಯಂತೆ ಆಚರಿಸೋಣ. ಪ್ರತಿ ಹಿಂದೂ ಮನೆಯಲ್ಲಿ ದೀಪ ಬೆಳಗಿಸಿ ಶ್ರೀರಾಮನನ್ನು ಆರಾಧಿಸೋಣ ಎಂದು ಸಿದ್ದನಗೌಡ ಪಾಟೀಲ್ ಹೇಳಿದರು.

ಜ.6 ರಂದು ಅಯೋಧ್ಯ ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡ ರಾಮಮೂರ್ತಿ ಪ್ರತಿಷ್ಠಾಪನೆಯ ಅಂಗವಾಗಿ ಕುಳೇಕುಮಟಗಿ ಗ್ರಾಮದಲ್ಲಿ ಎಲ್ಲ ಹಿಂದೂ ಕಾರ್ಯಕರ್ತರನ್ನೊಳಗೊಂಡು ಮನೆ ಮನೆಗೆ ಪತ್ರಗಳು ವಿತರಿಸಿ ಅವರು ಮಾತನಾಡಿದರು.

ನೂರಾರು ವರ್ಷಗಳ ಬಳಿಕ ರಾಮ ಮೂರ್ತಿ ಪ್ರತಿಷ್ಠಾಪನೆ ಆಗುವ ಕಾಲ ಕೂಡಿಬಂದಿದೆ. ಈ ಭಕ್ತಿಯ ಸಂಭ್ರಮ ದೇಶಾದ್ಯಂತ ಕಾಣಲಿದ್ದು ಇದಕ್ಕೆ ಸಾಕ್ಷಿ ಎಂಬಂತೆ ಎಲ್ಲ ಹಿಂದೂ ಸಮುದಾಯದ ಹಿರಿಯರು ತಾಯಂದ್ರು ಮನೆಗಳಲ್ಲಿ ಬಡಾವಣೆಯ ದೇವಸ್ಥಾನಗಳ ಆವರಣವನ್ನು ಸ್ವಚ್ಛತೆಗೊಳಿಸಿ ಜ.14ರಿಂದ ಪ್ರಾರ್ಥನೆ ವಿವಿಧ ರೀತಿಯ ಪೂಜಾ ಕಾರ್ಯಕ್ರಮ ಏರ್ಪಡಿಸುವಂತಾಗಬೇಕು ಎಂದು ಮನವಿ ಮಾಡಿ, ಮನೆ ಮನೆಗೆ ಜೈ ಶ್ರೀರಾಮ್ ಎಂದು ಘೋಷಣೆ ಕೂಗುತ್ತಾ ಮಂತ್ರಾಕ್ಷತೆ ವಿತರಿಸಿದರು.

ಈ ಸಂದರ್ಭದಲ್ಲಿ ಚೆನ್ನಪ್ಪ ಹೂಗಾರ್, ಬಸವರಾಜ್ ಮುರಟಗಿ, ಸಿದ್ದು ಬಡಿಗೇರ್, ಮಂಜುನಾಥ್ ದೇವಣ್ಗಾವ್, ಮಹಾಂತೇಶ್ ಮಾಗಣಗೇರಿ, ಅಗಸರ್ ಸೇರಿದಂತೆ ಅನೇಕ ಹಿಂದೂ ಕಾರ್ಯಕರ್ತರು ಇದ್ದರು.

# ಬಸ್ ಸೌಕರ್ಯ ಒದಗಿಸಲು ಶಾಸಕ ರಾಜುಗೌಡರಿಗೆ ಮನವಿ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ಸಿಂದಗಿ ಬಸ್ ಘಟಕದಿಂದ ದೇವರಹಿಪ್ಪರಗಿ ಮೂಲಕ ಕೊಲ್ಹಾರ ಪಟ್ಟಣಕ್ಕೆ ಸಾರ್ವಜನಿಕರ ಅನುಕೂಲಕ್ಕಾಗಿ ಬಸ್ ಸೌಕರ್ಯವನ್ನು ಒದಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಕೊಲ್ಹಾರದ ನಾಗರಿಕರು ಶಾಸಕ ಭೀಮನಗೌಡ (ರಾಜುಗೌಡ) ಪಾಟೀಲ ಅವರಿಗೆ ಮನವಿ ಅರ್ಪಿಸಿದರು.



ಕೊಲ್ಹಾರದ ರಾಜುಗೌಡರ ಸ್ನೇಹಿತರ ಬಳಗದವರು ಶಾಸಕರ ಸ್ವಗ್ರಾಮವಾದ ಕುದರಿಸಾಲೋಡಗಿಗೆ ತೆರಳಿ ಫಲಪುಷ್ಪ ನೀಡಿ ಗೌರವಿಸಿ ಮನವಿ ಅರ್ಪಿಸಿದ ತಕ್ಷಣ ರಾಜುಗೌಡರು ವಿಜಯಪೂರದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಡಿ.ಟಿ.ಓ ಅವರ ಜೊತೆ ದೂರವಾಣಿ ಮೂಲಕ ಮಾತನಾಡಿ, ಎರಡು ಪಟ್ಟಣಗಳಿಗೆ ಸಂಪರ್ಕ ಕಲ್ಪಿಸುವ ಪ್ರಯಾಣಿಕರ ಸಾರಿಗೆ ವಾಹನವಾದ ಬಸ್ ಸೇವೆಯನ್ನು ತಕ್ಷಣವೇ ಒದಗಿಸಿಕೊಡಬೇಕೆಂದು ಸೂಚನೆ ಕೊಟ್ಟರು.

ನನ್ನ ಸ್ವಕ್ಷೇತ್ರದ ಕೇಂದ್ರಸ್ಥಳವಾದ ದೇವರಹಿಪ್ಪರಗಿ ಪಟ್ಟಣದಿಂದ ಮಾರ್ಕಬ್ಬನಹಳ್ಳಿ-ಡೋಣೂರ-ಮಸಬಿನಾಳ-ಉಕ್ಕಲಿ-ಮನಗೂಳಿ-ಕಲಗುರ್ಕಿ-ಮುಳವಾಡ-ಮಲಘಾನ-ಹಿರೇಆಸಂಗಿ-ರೋಣಿಹಾಳ-ಹಿರೇ ಗರಸಂಗಿ ಮೂಲಕ ನೂತನ ತಾಲೂಕು ಕೇಂದ್ರ ಕೊಲ್ಹಾರ ಪಟ್ಟಣಕ್ಕೆ ಒಳಮಾರ್ಗದ ರಸ್ತೆ ಸಂಪರ್ಕವಾದ ನನ್ನ ಮತಕ್ಷೇತ್ರದ ಜನರಿಗೆ ಹಾಗೂ ಬಸವನ ಬಾಗೇವಾಡಿ ಮತಕ್ಷೇತ್ರದ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲಕರವಾಗುವ ಬಸ್ ಸೇವೆ ಇದಾಗಿದ್ದು ಇದ-ರಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲಕರವಾಗುವದು ಆದ-ದ್ದರಿಂದ ಸಾರಿಗೆ ಅಧಿಕಾರಿಗಳು ಬಸ್ ಸೇವೆ ಪ್ರಾರಂಭಿಸಲು ಕ್ರಮಕೈಗೊಳ್ಳಬೇಕೆಂದರು.

ಈ ವೇಳೆ ಕೊಲ್ಹಾರದ ಅವರ ಸ್ನೇಹಿತರ ಬಳಗದವರಾದ ನಿಂಗಪ್ಪ ಬರಗಿ, ಈರಣ್ಣ ಔರಸಂಗ, ವಿಶ್ವನಾಥ ಮೇಲಗಿರಿ, ಕಲ್ಲಪ್ಪ ಕಾಖಂಡಕಿ, ಬಸವರಾಜ ಮಮದಾಪೂರ, ಮಂಜುನಾಥ ಲಿಂಬಿಕಾಯಿ, ಪರಶುರಾಮ ಬ ಗಣಿ, ಉಪಸ್ಥಿತ-ರಿದ್ದರು.

# ವಿದ್ಯುತ್ ಕುರಿತ ಮಾಹಿತಿ ಅರಿಯಿರಿ :ಮುಧೋಳ



**ಉದಯರಶ್ಮಿ ನ್ಯೂಸ್**

ಚಿಮ್ಮಡ: ವಿದ್ಯುತ್ ಉಪಯೋಗದ ಹಾಗೂ ಅದರಿಂದಾಗುವ ಅನಾಹುತಗಳ ಕುರಿತ ಸಂಪೂರ್ಣ ಮಾಹಿತಿ ಪ್ರತಿಯೊಬ್ಬರಿಗೆ ತಿಳಿದಿರಬೇಕಾದ ಅವಶ್ಯಕತೆ ಇದೆ ಎಂದು ಹೆಸ್ಕಾಂ ರಬಕವಿ ವಿಭಾಗೀಯ ಅಧಿಕಾರಿ ಸುನೀಲ ಮುಧೋಳ ಹೇಳಿದರು.

ಗ್ರಾಮದ ಸರಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥ-ಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿದ್ಯುತ್ ಸುರಕ್ಷತಾ ಮಾಶಾಚರಣೆ ಹಾಗೂ ಅಭಿಯಾನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ವಿದ್ಯುತ್ ಪ್ರಸರಣದಿಂದ ಪ್ರತಿಯೊಬ್ಬರು ಸುರಕ್ಷತೆಯ ಅಂತರ ಕಾಯ್ದುಕೊಳ್ಳಬೇಕು, ವಿದ್ಯುತ್ ಉಳಿತಾಯಕ್ಕಾಗಿ ಐಎಸ್ಐ ಮಾರ್ಕ ಹೊಂದಿರುವ ಗುಣಮಟ್ಟದ ಸುರಕ್ಷತೆ ಹೊಂದಿರುವ ವಿದ್ಯುತ್ ಸಲಕರಣೆಗಳನ್ನು ಮಾತ್ರ ಖರೀದಿಸಬೇಕು. ಅನವಶ್ಯಕ ವಿದ್ಯುತ್ ಬಳಕೆ ನಿಲ್ಲಿಸಬೇಕು, ವಿದ್ಯುತ್ ಕಂಬ, ತಂತಿಗಳ ಮೇಲೆ ಬಟ್ಟೆ ಒನಹಾಕುವುದು, ಅದಕ್ಕೆ ದನ ಕರುಗಳನ್ನು ಕಟ್ಟುವುದು ಅಪಾಯಕ್ಕೆ ಆಹ್ವಾನ ನೀಡಿದಂತೆ. ಇದರಿಂದ ಪ್ರತಿಯೊಬ್ಬರು ಎಚ್ಚ-ರಿಕೆಯಿಂದ ಇರಬೇಕು, ಮಕ್ಕಳು ವಿದ್ಯುತ್ ಪ್ರಸರಣವಿರುವ ಸ್ಥಳಗಳಲ್ಲಿ ಗಾಳಿಪಟ ಹಾರಿಸುವುದು ಅದರ ಹತ್ತಿರ ಆಟ ಆಡಬಾರದು ಎಂದರು.

ಶಾಲೆಯ ಮುಖ್ಯ ಗುರು ಬಿ.ಎಸ್. ಹಲಗಿ ಮಾತನಾಡಿ, ವಿದ್ಯುತ್ ಇಲಾಖೆಯ ಪ್ರತಿಯೊಬ್ಬ ಸಿಬ್ಬಂದಿ ಬೆಳಕು ಕೊಡುವ ದೇವರಿದ್ದಂತೆ ಅವರನ್ನು ಪ್ರತಿಯೊಬ್ಬರು ಗೌರವದಿಂದ ಕಾಣಬೇಕೆಂದರು.

ಕಾರ್ಯಕ್ರಮದಲ್ಲಿ ವಿದ್ಯುತ್ ಸಹಾಯಕ ಕೆ.ಜಿ. ಮಕಾನದಾರ, ಎಫ್.ಎಚ್. ಪಲ್ಲನ್, ಮಲ್ಲೇಶ ಸನದಿ, ಕಿರಣ ಕಲ್ಲೋಳಿ, ಮಹಾಲಿಂಗ ಕಂಟೆಪ್ಪಗೋಳ, ಮುದಕಪ್ಪಾ ಜಟ್ಟರಕಿ, ಶಿವು ನಾಯಿಕವಾಡಿ, ಸೈಯದ ನದಾಫ, ಶ್ರೀನಿವಾಸ ಮಲ್ಲಾರಿ, ಸರಕಾರಿ ಉರ್ದು ಶಾಲೆಯ ಮುಖ್ಯ ಗುರು ಝೂಕಿರಹುಸೇನ ಇಂಡಿಕರ ಸೇ-ರಿದಂತೆ ಹಲವರಿದ್ದರು.




# ಹಳೆಯ ವಿದ್ಯಾರ್ಥಿಗಳಿಂದ ಶಾಲೆಗೆ ಆರ್ಥಿಕ ಸಹಾಯ

**ಉದಯರಶ್ಮಿ ನ್ಯೂಸ್**

ಕೊಲ್ಹಾರ: ತಾಲೂಕಿನ ಕುಬಕಡ್ಡಿ ಗ್ರಾಮದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗೆ ನಮ್ಮ ಶಾಲೆ ನಮ್ಮ ಕೊಡುಗೆ ಎನ್ನುವ ಪರಿಕಲ್ಪನೆ ಯೋಜನೆಯ ಅಂಗವಾಗಿ ಶಾಲೆಯ ಹಳೆಯ ವಿಧ್ಯಾರ್ಥಿಗಳಿಂದ ಆರ್ಥಿಕ ಧನಸಹಾಯ ದೊರಕಿತು.

ಬಳ್ಳಾರಿಯ ಎನ್.ಟಿ.ಪಿ.ಸಿ ಕೇಂದ್ರದಲ್ಲಿ ಸರಕಾರಿ ಅಭಿಯಂತರರಾಗಿ ಸೇವೆ ಸಲ್ಲಿಸುತ್ತಿರುವ ಶಿವನಗೌಡ ಬಿರಾದಾರ 30000, ಗ್ರಾಮ ಪಂಚಾಯತ ಮಾಜಿ ಸದಸ್ಯರಾದ ಭಿಮಪ್ಪ ಕಂಬಪ್ಪ ಚಲವಾದಿ 11000, ಕೃಷಿಕ ಮಿತ್ರರಾದ ಲಕ್ಷ್ಮಣ ಡಾಳೆ 3000 ರೂ. ಗಳನ್ನು ಶಾಲೆಯ ಅಭಿವೃದ್ದಿಗಾಗಿ ಧನ ಸಹಾಯವನ್ನು ದೇಣಿಗೆ ರೂಪದಲ್ಲಿ ಕೊಡಮಾಡಿದರು.

ಈ ಸಂದರ್ಭ ಎಸ್. ಆರ್.ಬಿರಾದಾರ ಮಾತನಾಡಿ, ನಾವು ಕಲಿತಂತಹ ಶಾಲೆಯ ನಮ್ಮೂರ ಮಕ್ಕಳು ಇಂದಿನ ದಿನಮಾನಗಳಲ್ಲಿ ಅವಶ್ಯಕವಾಗಿರುವ ಗುಣಮಟ್ಟದ ಶಿಕ್ಷಣವನ್ನು ಪಡೆಯಲು ಮಕ್ಕಳಿಗೆ ಸಾಧ್ಯವಾಗಲು ಶಾಲೆಗೆ ಅಗತ್ಯವಿರುವ ಸೌಲಭ್ಯವನ್ನು ದೊರಕಿಸಿಕೊಳ್ಳಲು ಆರ್ಥಿಕವಾಗಿ ಸ್ಥಿತಿವಂತರಾದ ಪ್ರತಿಯೊಬ್ಬರು ಸಹಾಯ ಸಹಕಾರ ಮಾಡುವದರಲ್ಲಿ ಮುಂದೆ ಬಂದಾಗ ಶಾಲೆಯ ಪ್ರಗತಿಯ ಜೊತೆಗೆ ಆದ-ನಿಕ ಶೈಲಿಯ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಶಿಕ್ಷಣವನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಈ ದಿಸೆಯಲ್ಲಿ ಹಳೆಯ ವಿದ್ಯಾರ್ಥಿಗಳು ಮತ್ತು ಪ್ರಮುಖರು ಕಾರ್ಯೋನ್ಮುಖರಾಗಬೇಕೆಂದು ಹೇಳಿದರು.

ಈ ಸಂದರ್ಭಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷ ಮುರುಗೇಶ ಹಳ್ಳಿ, ಮುಖ್ಯ ಗುರು ಸಿದ್ದು ಕೋಟ್ಯಾಳ, ಶಿಕ್ಷಕರಾದ ಹಣಮಂತ ಬಿರಾದಾರ, ಬಾಬು ಪವಾರ, ಹೇಮಾವತಿ, ಕವಿತಾ ಹಿರೇಮಠ, ಶಾಂಪ್ಪ ನಾಗರಹಳ್ಳಿ, ಆನಂದ ಹೊಲ್ದೂರ, ಲಕ್ಷ್ಮೀ ವನೇಸಿ, ಅನೇಕರು ಉಪಸ್ಥಿತರಿದ್ದರು.

# ಸರ್ವ ಧರ್ಮದ ದೇವಸ್ಥಾನಗಳನ್ನು ಶುಚಿಗೊಳಿಸಿ :ಬೆಳ್ಳುಬ್ಬಿ



**ಉದಯರಶ್ಮಿ ನ್ಯೂಸ್**ಕೊಲ್ಹಾರ: ಭಾರತ ದೇಶದ ವಿಶ್ವದ ಎಲ್ಲ ದೇಶಗಳಲ್ಲಿ ವಾಸಿಸುವ ಹಿಂದೂಗಳ ಬಹುದಿನದ ಕನಸು ಇಂದು ನನಸಾಗುತ್ತಿರುವದು ಭಾರತೀಯರೆಲ್ಲ-ರಿಗೂ ಹೆಮ್ಮೆಯ ಸಂಗತಿಯಾಗಿದ್ದು ಅಂದಿನ ದಿವಸ ಪ್ರತಿಯೊಂದು ಊರಿನ ಮನೆಮನೆಗಳಲ್ಲಿ, ದೇವಸ್ಥಾನಗಳಲ್ಲಿ ದೀಪೋತ್ಸವವನ್ನು ಆಚರಣೆ ಮಾಡುವದರ ಮೂಲಕ ರಾಮಲಲ್ಲಾ ದೇವರ ಪ್ರಾರ್ಥನೆ ಮಾಡೋಣ ಎಂದು ಮಾಜಿ ಸಚಿವ ಎಸ್. ಕೆ.ಬೆಳ್ಳುಬ್ಬಿ ಹೇಳಿದರು.

ಪ್ರಧಾನಿ ನರೇಂದ್ರ ಮೋದಿಯವರು ಮಾಡುತ್ತಿರುವ ದೇವಸ್ಥಾನಗಳ ಸ್ವಚ್ಚತಾ ಕಾರ್ಯಕ್ರಮದ ಭಾಗವಾಗಿ ರವಿವಾರ ಪಟ್ಟಣದ ದ್ಯಾಮವ್ವದೇವಿ ದೇವಸ್ಥಾನದ ಹಾಗೂ ಆವರಣದ ಸ್ವಚ್ಚತೆಯನ್ನು ಮಾಡುವುದರ ಮೂಲಕ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು ಹಿಂದೂಗಳ ಭಾವನೆಯ ಆರಾಧ್ಯದೈವ ರಾಮದೇವನು ಜನ್ಮತಾಳಿದ ಪುಣ್ಯಭೂಮಿಯಲ್ಲಿಯೇ ಐದುನೂರು ವರ್ಷಗಳ ನಂತರ ಭವ್ಯವಾದ ರಾಮಮಂದಿರ ಉದ್ಘಾಟನೆಗೊಳ್ಳುತ್ತಿರುವುದು ಹಲವಾರು ಮಹನೀಯರ ಸತತ ಪರಿಶ್ರಮದ ತ್ಯಾಗ, ನಿಸ್ವಾರ್ಥ-ರ್ಥ ಮನೋಭಾವನೆಯಿಂದ ಸಾಧ್ಯವಾಗುತ್ತಿರುವುದು ಸಂತಸದಾಯಕ ವಿಷಯವಾಗಿದೆ ಎಂದರು.

ವಿಶಾಲವಾದ ದ್ಯಾಮವ್ವದೇವಿ ದೇವಸ್ಥಾನದ ಗರ್ಭಗುಡಿ, ಪ್ರಾಂಗಣ, ಅಂಗಳವನ್ನು ಕಾರ್ಯಕರ್ತರೊಂದಿಗೆ ಸೇರಿ ಬೆಳ್ಳುಬ್ಬಿಯವರು ಕಸ ಕಡ್ಡಿ ಸ್ವಚ್ಚ ಮಾಡಿ ಜಲಾಭಿಷೇಕದಿಂದ ದೇವರ ಗುಡಿಯನ್ನು ಸ್ವಚ್ಚಂದಗೊಳಿಸಿ, ಇಂತಹ ಮಹತ್ಕಾರ್ಯದ ನೆನಪಿಗಾಗಿ ಪಟ್ಟಣದಲ್ಲಿರುವ ಮತ್ತು ಬಸವನ ಬಾಗೇವಾಡಿ ಮತಕ್ಷೇತ್ರದ ಪ್ರತಿಯೊಂದು ಊರಿನ ಸರ್ವ ಧರ್ಮದ ದೇವಸ್ಥಾನಗಳ ಸ್ವಚ್ಚತಾ ಕಾರ್ಯವನ್ನು ನಾವು-ನೀವು ಸೇರಿ ಮಾಡಿ ನರೇಂದ್ರ ಮೋದಿಯವರ ಆದರ್ಶವನ್ನು ಪಾಲಿಸೋಣ ಎಂದು ಕರೆಕೊಟ್ಟರು.

ಈ ಸಂದರ್ಭದಲ್ಲಿ ಚಂದ್ರಶೇಖರಯ್ಯ ಗಣಕುಮಾರ, ಈರಯ್ಯ ಮಠಪತಿ, ಪಟ್ಟಣ ಪಂಚಾಯತಿ ಸದಸ್ಯರಾದ ಅಪ್ಪಸಿ ಮಟ್ಯಾಳ, ಬಾಬು ಭಜಂತ್ರಿ, ಪುಂಡಲೀಕ ಕಂಬಾರ, ವೀರಭದ್ರಪ್ಪ ಬಾಗಿ, ರಮೇಶ ಗಣಿ, ಡೋಂಗ್ರಿ ಕಟಬರ, ಪರಮಾನಂದ ಬರಗಿ, ರಾಜು ಬಗಲಿ, ಕಲ್ಲಪ್ಪ ಗೊಳಸಂಗಿ, ದ್ಯಾವಪ್ಪ ತುಂಬರಮಟ್ಟಿ, ನಾಮದೇವ ಪವಾರ ಅನೇಕ ಪ್ರಮುಖರು ಸ್ವಚ್ಚತಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ವಿವೇಕಾನಂದರ ಚಿಂತನೆಗಳನ್ನು ಅಳವಡಿಸಿಕೊಳ್ಳಿ



**ಉದಯರಶ್ಮಿ ನ್ಯೂಸ್**ತಿ-ಕೋಟಾ: ಭಾರತವು ಉನ್ನತ ಆದರ್ಶವಾದವನ್ನು ಹೊಂದಿತ್ತು, ಅದನ್ನು ಸ್ವಾಮೀಜಿ ಪಾಲಿಸಬೇಕೆಂದು ಬಯಸಿದ್ದರು, ಆದರೆ ಲಕ್ಷಾಂತರ ಜನರು ಹಸಿವಿನಿಂದ ಬಳಲುತ್ತಿರುವ ಆದರ್ಶವಾದವು ಅರ್ಥ-ಹೀನವಾಗಿತ್ತು. ಹೀಗಾಗಿ, ಮನೆಗೆ ಹಿಂತಿರುಗಿ, ಅವರು ಉನ್ನತ ತತ್ವಶಾಸ್ತ್ರಕ್ಕಿಂತ ಸಾಮಾಜಿಕ ಸಮಸ್ಯೆಗಳ ಬಗ್ಗೆ ಹೆಚ್ಚು ಮಾತನಾಡಿದರು ಎಂದು ತೆಲಸಂಗದ ವಿರೇಶ್ವರ ದೇವರು ಮಾತನಾಡಿದರು.

ತಾಲ್ಲೂಕಿನ ಹೊನವಾಡ ಗ್ರಾಮದಲ್ಲಿ ಸ್ವಾಮಿ ವಿವೇಕಾನಂದ ಯುವಕರ ಸಂಘದ ವತಿಯಿಂದ ಸ್ವಾಮಿ ವಿವೇಕಾನಂದ ಜಯಂತಿ ಆಚರಣೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಹೋರಾಟ ದೊಡ್ಡದಾದಷ್ಟೂ ಗೆಲುವು ಅಮೋಘ. ಒಂದು ಸಮಯದಲ್ಲಿ ಒಂದು ಕೆಲಸವನ್ನು ಮಾಡಿ, ಮತ್ತು ಹಾಗೆ ಮಾಡುವಾಗ ನಿಮ್ಮ ಸಂಪೂರ್ಣ ಆತ್ಮವನ್ನು ಅದರಲ್ಲಿ ಇರಿಸಿ ಎಂದು ಅಧ್ಯಕ್ಷತೆ ವಹಿಸಿದ ಎಸ್ ಜಿ ಲಕ್ಕುಂಡಿಮಠ ಹೇಳಿದರು.

ಅಧ್ಯಯನಕ್ಕೆ ಏಕಾಗ್ರತೆ ಅಗತ್ಯ, ಏಕಾಗ್ರತೆಗೆ ಧ್ಯಾನ ಅಗತ್ಯ ಎಂದ ಸ್ವಾಮಿಯವರು ಧಾರ್ಮಿಕ ಬೆಳವಣಿಗೆಯನ್ನು ಶಿಕ್ಷಣದ ಮುಖ್ಯ ಗುರಿಯಾಗಿ ಪರಿಗಣಿಸಿದ್ದರು ಎಂದು ರೇಸಿ ಪಾಟೀಲ ಹೇಳಿದರು.

ಶಿಕ್ಷಣ ಕ್ಷೇತ್ರದಲ್ಲಿ ಆಯ್ಕೆಯಾದವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬಾಲ ಪ್ರತಿಭಾ ಪುರಸ್ಕೃತರಾದ ಕು.ಅದ್ವಿತಾ ಬಡಿಗೇರ, ಚಂದ್ರಶೇಖರ ಕೊಣ್ಣೂರ, ಎಸ್ ಕೆ ಕುಂಬಾರ, ನವೀನ್ ಹತ್ತಿಕಾಳ, ಗಣೇಶ ಗುಗ್ಗರಿ ಸೇರಿದಂತೆ ಮತ್ತಿತರರು ಇದ್ದರು.

# ನಿವೃತ್ತಿ ಬಳಿಕ ವಕೀಲ ವೃತ್ತಿಗೆ ಸಜ್ಜಾದ ರಜಪೂತ

**ಉದಯರಶ್ಮಿ ನ್ಯೂಸ್**



ಇಂಡಿ: ಎಲ್ಲೆಡೆ ಸರ್ಕಾರಿ ಸೇವೆಯಲ್ಲಿರುವವರು ತಮ್ಮ ಸೇವಾ ನಿವೃತ್ತಿಯ ಬಳಿಕ ನಿಶ್ಚಿಂತೆಯಿಂದ ವಿಶ್ರಾಂತಿಯ ಜೀವನ ನಡೆಸುವುದು ಸಾಮಾನ್ಯ ಸಂಗತಿ. ಇಲ್ಲೊಬ್ಬ ಸರ್ಕಾರಿ ನೌಕರ ಸೇವಾ ನಿವೃತ್ತಿಯ ಗಳಿಗೆಯಲ್ಲಿ ಕಾನೂನು ಪದವಿ ತೇರ್ಗಡೆಯಾಗುವ ಮೂಲಕ ಹಲವರು ಹುಬ್ಬೇ-ರಿಸುವಂತೆ ಮಾಡಿದ್ದಲ್ಲದೆ, ನಿವೃತ್ತಿಯ ಬಳಿಕ ವಕೀಲ ವೃತ್ತಿ ಆರಂಭಿಸಲು ಸಜ್ಜಾಗಿದ್ದಾರೆ.

ಪಟ್ಟಣದ ತಹಶೀಲ್ದಾರ ಕಚೇ-ರಿಯ ಎಫ್.ಡಿ.ಎ. ಹುದ್ದೆ ನೌಕರ ಪುಂಡಲೀಕ ರಜಪೂತ ಎಂಬುವರೇ ಇಂತಹ ಅದಮ್ಯ ಉತ್ಸಾಹ ತೋರಿದ ಉತ್ಸಾಹಿ.

ಆರಂಭದಲ್ಲಿ ಗ್ರಾಮ ಲೆಕ್ಕಾಧಿಕಾ-ರಿಯಾಗಿ ಸೇವೆ ಪ್ರಾರಂಭಿಸಿದ ಇವರು ಕಾಲ ಕಳೆದಂತೆ ಎಫ್.ಡಿ.ಎ. ನೌಕರರಾಗಿ ಬಡ್ತಿ ಹೊಂದಿದ್ದಾರೆ. ಅತ್ತ ಉತ್ತಮ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಾ ಬಂದ ಇವರು, ಯುವಕರೂ ನಾಚುವ ರೀತಿಯಲ್ಲಿ ಸೇವೆಯ ಜೊತೆಗೆ ಬಿಡುವಿನ ವೇಳೆಯಲ್ಲಿ ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ ಕಾನೂನು ಪದವಿ ತೇರ್ಗಡೆಯಾಗಿ ಅಚ್ಚರಿ ಮೂಡಿಸಿದ್ದಾರೆ.

ಭವಿಷ್ಯದ ಕೆಲವೇ ದಿನಗಳಲ್ಲಿ ಸರ್ಕಾರಿ ಸೇವಾ ನಿವೃತ್ತಿಯ ಬಳಿಕ ವಕೀಲ ವೃತ್ತಿಯ ಸೇವೆ ಆರಂಭಿಸುವ ಕನಸು ಕಂಡ ಇವರ ಅಪರೂಪದ, ಯುವಕರಿಗೆ ಮಾದರಿಯಾದ ಗಮನಾರ್ಹ ಸಾಧನೆಗೆ ಇಂಡಿ ತಹಶೀಲ್ದಾರ ಬಿ.ಎಸ್. ಕಡಕಬಾವಿ, ಉಪ ತಹಶೀಲ್ದಾರ ಸಿದ್ದರಾಮ ಮುಜಗೊಂಡ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿ ಇವರ ವಕೀಲ ವೃತ್ತಿಯ ಕನಸು ನನಸಾಗಲಿ ಎಂದು ಹಾರೈಸಿದ್ದಾರೆ.

# ಹೊಸವರ್ಷ: ಭರವಸೆ ಮತ್ತು ಆತಂಕ!

**ಪ್ರೊ. ರಹಮತ್ ತರೀಕೆರೆ**



2023ನೇ ಇಸವಿಯ ಮುಖ್ಯ ಘಟನೆಯೆಂದರೆ, ಕರ್ನಾಟಕದ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿದ್ದು ಮತ್ತು ರಾಜಕೀಯವಾಗಿ ದಕ್ಷಿಣ ಭಾರತವು ಅಡಳಿತದಲ್ಲಿ ಬಿಜೆಪಿ ಮುಕ್ತವಾಗಿದ್ದು. ಈ ಫಲಿತಾಂಶವು ಇಡೀ ಭಾರತದ ರಾಜಕಾರಣದ ದಿಕ್ಕನ್ನು ನಿರೂಪಿಸಬಹುದು ಎಂದು ಆಶಿಸಲಾಗಿತ್ತು. ಆದರೆ ಛತ್ತೀಸಗಢ, ಮಧ್ಯಪ್ರದೇಶ, ರಾಜಸ್ಥಾನಗಳಲ್ಲಿ ಬಿಜೆಪಿಯ ಗೆಲುವು, ಕೌಬೆಲ್ಟ್ ಎನ್ನಲಾಗುವ ಉತ್ತರ ಭಾರತದ ಆಲೋಚನಾ ಕ್ರಮವು ಬೇರೆಯೇ ಇದೆ ಎಂಬುದನ್ನು ಸೂಚಿಸಿತು. ದಕ್ಷಿಣ ಭಾರತದಲ್ಲಿ ರಾಜ-ಕೀಯವಾಗಿ ಬಿಜೆಪಿ ಸೋತರೂ, ಅದರ ಮತಗಳಿಕೆ ಕಡಿಮೆಯಾಗಿಲ್ಲ; ಸಮಾಜದಲ್ಲಿ ಸಂಘಪರಿವಾರವು ಬಿತ್ತಿದ ಆಲೋಚನೆಗಳು ಪ್ರಭಾವಶಾಲಿಯಾಗಿವೆ.

ಈ ಮಿತಿಗಳಲ್ಲೂ 2023ನೇ ವರ್ಷದಲ್ಲಿ ನಡೆದ ಐದು ರಾಜ್ಯಗಳ ಚುನಾವಣೆಗಳು, ಉತ್ತರ-ದಕ್ಷಿಣಗಳಲ್ಲಿರುವ ಒಂದು ವ್ಯತ್ಯಾಸವನ್ನು ಸೂಚಿಸಿವೆ. ಅದೆಂದರೆ ಹಾರ್ದಿಕವಾದ ಸಾಮಾಜಿಕ ಸಂಬಂಧ ಮತ್ತು ಆರ್ಥಿಕ ಏಳಿಗೆಯ ಪ್ರಶ್ನೆಗಳಿಗಿಂತ 'ಧಾರ್ಮಿಕ' ಎನ್ನಲಾಗುವ ವಿಷಯಗಳಿಗೆ ಉತ್ತರದ ನೆಲದಲ್ಲಿ ಹೆಚ್ಚು ನೀರುಗೊಬ್ಬರಗಳಿವೆ ಎನ್ನುವುದು. ಈ ತರ್ಕದ ಮುಂದುವ-ರಿಕೆ ಎಂಬಂತೆ, ಈಗ ಅಯೋಧ್ಯೆಯಲ್ಲಿ ರಾಮಮಂದಿರವು, ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಉದ್ಘಾಟನೆಯಾಗುತ್ತಿದೆ. ಇದರ ಬೆನ್ನಲ್ಲೇ 2024ನೇ ಇಸವಿಯ ಮಹಾಚುನಾವಣೆ ಬರುತ್ತಿದೆ. ಗೃಹಮಂತ್ರಿಯವರು ಪೌರತ್ವ ಕಾಯಿದೆಯನ್ನು ಜಾರಿಗೊಳಿಸುವುದಾಗಿ ಘೋಷಿಸಿದ್ದಾರೆ. 2025ಕ್ಕೆ ಆರೆಸ್ಸೆಸ್ ಹುಟ್ಟಿ ಶತಮಾನವನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ 2024ರ ಚುನಾವಣೆಯ ರಾಜಕೀಯ ಸೋಲು-ಗೆಲುವುಗಳು ನಿರ್ಣಾಯಕವಾಗಲಿವೆ. 2024ರ ಚುನಾವಣೆಯಲ್ಲಿ ಒಂದೊಮ್ಮೆ ಬಿಜೆಪಿ ವಿಜಯ ಸಾಧಿಸಿದರೆ, ಭಾರತದ ಬೀದಿಗಳಲ್ಲಿ ಈಗಿರುವ ಹಿಂಸೆ ಮತ್ತಷ್ಟು ಸಾಮಾನ್ಯ ವಿದ್ಯಮಾನವಾಗಬಹುದು. ಕ್ರೈಸ್ತ ಮುಸ್ಲಿಂ ಬೌದ್ಧ ಧಾರ್ಮಿಕ ಸಮುದಾಯಗಳು ಹೊಸಹೊಸ ಬಿಕ್ಕಟ್ಟಿಗೆ ಸಿಲುಕಬಹುದು. ಕೂಡುಬಾಳಿನ ರಚನೆ ಹಾಗೂ ಬಹುಸಾಂಸ್ಕೃತಿಕ ಲೋಕಗಳು ಅಳಿವಿಗೆ ಸರಿಯಬಹುದು. ಶೂದ್ರ ದಲಿತ ಸಮುದಾಯಗಳ ಪಳಗಿಸುವಿಕೆಯು ಅರ್ಥಾತ್ ಬ್ರಾಹ್ಮಣವಾದಿ ಸಂಸ್ಕೃತಿಯ ಹೇರಿಕೆ ಹೆಚ್ಚಾಗಬಹುದು. ಮುಖ್ಯವಾಗಿ ಭಾರತದ ಸಂವಿಧಾನವು ಅಸ್ತಿತ್ವದ ಪ್ರಶ್ನೆಯನ್ನು ಎದುರಿಸಲಿರುವುದು. ಮಾರುಕಟ್ಟೆ ಆರ್ಥಿಕತೆಯು ಮತ್ತಷ್ಟು ಗರಿಗೆದರಬಹುದು.

ವಿಶೇಷವೆಂದರೆ, ಮತೀಯವಾದಿ ರಾಜಕಾರಣವು ಕೇವಲ ಚುನಾವಣಾ ಗೆಲುವೊಂದರಿಂದಲೇ ತನಗೆ ಬೇಕಾದ ಪಲ್ಲಟಗಳನ್ನು ಆಗು ಮಾಡುವುದಿಲ್ಲ. ಚುನಾವಣಾ ವಿಜಯ ಮತ್ತು ರಾಜ್ಯಾಧಿಕಾರಗಳು ಈ ಕೆಲಸಕ್ಕೆ ಬೇಕಾದ ಬಲವನ್ನು ಅದಕ್ಕೆ ನೀಡುತ್ತ ಬಂದಿವೆ ನಿಜ. ಆದರೆ ಇದರ ಜತೆಗೆ ಅದು ತನ್ನ ಸಿದ್ಧಾಂತವನ್ನು ಜನರ ದೈನಿಕ ಬಾಳಿನಲ್ಲಿ ಬೇರೂ-ರಿಸಲು, ಅದನ್ನು ಅವರ ಸಾಮಾನ್ಯ ಜ್ಞಾನವನ್ನಾಗಿ ಮಾಡಲು ಯತ್ನಿಸುತ್ತದೆ. ಅರ್ಥಾತ್ ತನ್ನ ರಾಜಕಾರಣಕ್ಕೆ ಜನಸಮ್ಮತಿಯನ್ನು ಉತ್ಪಾದಿಸುತ್ತದೆ. ಚುನಾವಣೆಗಳಲ್ಲಿ ಗೆಲ್ಲಲಿ ಸೋಲಲಿ, ಸೈದ್ಧಾಂತಿಕವಾಗಿ ಕೆಲಸ ಮಾಡುತ್ತಲೇ ಇರುತ್ತದೆ. ಈ ದಿಸೆಯಲ್ಲಿ ಅದು ಒಂದು ಶತಮಾನದಿಂದ ದುಡಿಯುತ್ತ ಬಂದಿದೆ.

ಸಂಘಪರಿವಾರವು ತನ್ನ ರಾಜ-ಕಾರಣಕ್ಕೆ ಭಾವನಾತ್ಮಕ ನೆಲೆಯಲ್ಲಿ ಸಂಸ್ಕೃತಿಯನ್ನು ಒಂದು ಮುಖ್ಯ ಅಸ್ತ್ರವನ್ನಾಗಿ ಮಾಡಿಕೊಂಡು ಬಂದಿದೆ. ಇದನ್ನು ಸಾಂಸ್ಕೃತಿ-ಕ ರಾಜಕಾರಣ ಎನ್ನುವುದಾದರೆ, ಇದು ಅನ್ಯೀಕರಣ (ಅದರಿಂಗ್), ದುರುಳೀಕರಣ (ಡೆಮೊನೈಜಿಂಗ್), ಆಕ್ರಮಣ, ಅಳಿಸುವಿಕೆ (ಎರೇಸಿಂಗ್), ಬದಲಿಸುವಿಕೆ (ರಿಪ್ಲೇಸಿಂಗ್), ಮರುನಾಮಕರಣ (ರಿನೇಮಿಂಗ್) ಮುಂತಾದ ಆಯಾಮಗಳಲ್ಲಿ ಜಾರಿಯಾಗುತ್ತ ಬಂದಿದೆ. ಕೆಲವೇ ವರ್ಷಗಳ ಹಿಂದೆ ಅದು ಆರಂಭಿಸಿದ ಗಾಂಧಿ ನೆಹರು ಅವರನ್ನು ಕು-ರಿತ ತಪ್ಪು ಕಥನಗಳು ಮತ್ತು



ಪೂರ್ವಗ್ರಹಗಳು ಹೊಸತಲೆಮಾ-ರಿನಲ್ಲಿ ಬೇರೂರಿಸಿದೆ; ರಾಹುಲ್ ಗಾಂಧಿಯನ್ನು ದಡ್ಡನೆಂದು ಬಿಂಬಿಸಿದೆ. ಅಂಬೇಡ್ಕರ್ ಅವರು 1940ರ ದಶಕದ ಮುಸ್ಲಿಂಲೀಗ್ ರಾಜಕಾರಣವನ್ನು ಕುರಿತು ಆಡಿರುವ ಸಾಂದರ್ಭಿಕ ಟೀಕೆಗಳನ್ನು ಇಟ್ಟುಕೊಂಡು, ಸಂಘ ಪರಿವಾರ ಮುಸ್ಲಿಮರ ಮತ್ತು ದಲಿತರ ನಡುವಣ ಬಿರುಕಿಗೆ ಯತ್ನಿಸಿದೆ. ಮುಸ್ಲಿಮರನ್ನು ಮತ್ತು ಇಸ್ಲಾಮನ್ನು ಈ ನಾಡಿಗೆ ಹೊರತಾದ ಸಂಗತಿಗಳೆಂಬ ಗ್ರಹಿಕೆಯನ್ನು ನೆಲೆಗೊಳಿಸಿದೆ. ವೈಚಾ-ರಿಕ ಚಿಂತಕರನ್ನು ಪೀಡೆಗಳೆಂದು ನಿರೂಪಿಸಿದೆ. 2024ರ ನಂತರ ಅದಕ್ಕೆ ರಾಜಕೀಯ ಗೆಲುವು ಸಿಕ್ಕರೆ, ಅದರ ದ್ವೇಷದ ರಾಜಕಾರಣದಲ್ಲಿ ಹೊಸಹೊಸ ಉಪಾಯಗಳು ಹುಟ್ಟಬಹುದು. ನಿರ್ದಿಷ್ಟ ವ್ಯಕ್ತಿ, ತತ್ವಸಿದ್ಧಾಂತ, ಸಮುದಾಯ, ಭಾಷೆ, ಸಂಸ್ಕೃತಿ, ಧರ್ಮವನ್ನು ದ್ವೇಷಿಸುವ ಮೂಲಕವೇ ರೂಪುಗೊಳ್ಳುವ ಅದರ ಸಾಂಸ್ಕೃತಿಕ ರಾಜಕಾರಣವು ಕೇವಲ ಭಾವನೆ ಆಲೋಚನೆಗಳ ಮಟ್ಟದಲ್ಲಿ ಉಳಿಯುವುದಿಲ್ಲ. ಅದು ಸಂಬಂಧಪಟ್ಟ ವ್ಯಕ್ತಿ, ಸಿದ್ಧಾಂತ, ಸಮುದಾಯಗಳ ಆರ್ಥಿಕತೆ ಮತ್ತು ರಾಜಕೀಯ ಪ್ರಾತಿನಿಧ್ಯವನ್ನು ಶಿಥಿಲಗೊಳಿಸುವುದು.

ಸಂಘಪರಿವಾರದ ಸ್ಮೃತಿನಾಶದ ತಂತ್ರಗಾರಿಕೆಯನ್ನು ಬಾಬಾಬುಡನಗಿರಿ ಪ್ರಕರಣದಲ್ಲಿ ಗಮನಿಸಬಹುದು. ಹಿಂದೆ ತರೀಕೆರೆ ಚಿಕ್ಕಮಗಳೂರು ಕಡೂರು ಸೀಮೆಯಲ್ಲಿ, ಪ್ರವಾಸಿಗರಿಗೆ ಸಮೀಪದ ಪ್ರೇಕ್ಷಣೀಯ ಜಾಗಗಳ ಮಾಹಿತಿ ಕೊಡಲು ಬರೆಯಿಸಿದ ಫಲಕಗಳಲ್ಲಿ ಬಾಬಾಬುಡನಗಿ-ರಿಯ ಹೆಸರು ಇರುತ್ತಿತ್ತು. ಈ ಸೂಫಿತಾಣವನ್ನು ದತ್ತಪೀಠವೆಂದು ಪ್ರತಿಪಾದಿಸುವ ಚಳವಳಿಯ ಭಾಗವಾಗಿ ಬಾಬಾಬುಡನಗಿರಿಯ ಹೆಸರಿನ ಅಳಿಸುವಿಕೆ ಶುರುವಾಯಿತು. ಸರ್ಕಾರಿ ದಾಖಲೆಗಳಲ್ಲಿ, ಮೈಲಿಕಲ್ಲುಗಳಲ್ಲಿ, ಪ್ರವಾಸಿ ಇಲಾಖೆಯ ಸೂಚನಾಫಲಕಗಳಲ್ಲಿ ಇದ್ದ ಬಾಬಾಬುಡನಗಿರಿ ಹೆಸರನ್ನು ತೆಗೆಯುತ್ತ ಬರೆಯಲಾಯಿತು. ಪತ್ರಕರ್ತರಿಗೆ ವರದಿ ಮಾಡುವಾಗ ಬಾಬಾಬುಡನಗಿರಿ ಶಬ್ದವನ್ನು ಬಳಸದಂತೆ ತಾಕೀತು ಮಾಡಲಾಯಿತು. ಇದೇ ಪ್ರಕ್ರಿಯೆಯಲ್ಲಿ ಮುಸ್ಲಿಮ್ ರಾಜರ/ಸಂತರ ಹೆಸರಲ್ಲಿರುವ ಊರು, ರಸ್ತೆ, ರೈಲು, ರೈಲ್ವೆನಿಲ್ದಾಣ ಹೆಸರುಗಳ ಬದಲಾವಣೆ ದೇಶಾದ್ಯಂತ ನಡೆದವು. 'ಬಾಬಾಬುಡನ್ ಸಂತನು ಮಲೆನಾಡಿಗೆ ಅರಬಸ್ಥಾನದಿಂದ ಕಾಫಿಯನ್ನು ತಂದು ಪರಿಚಯಿಸಿದನು. ಟಿಪ್ಪು ಕರ್ನಾಟಕಕ್ಕೆ ಚೀನಾದಿಂದ ರೇಷ್ಮೆಯನ್ನು ತಂದು ಪರಿಚಯಿಸಿದನು ಎಂಬ ಸಂಗತಿಗಳನ್ನು ಪಠ್ಯದಿಂದ ತೆಗೆದುಹಾಕಲಾಯಿತು.



ಪರಂಪರಾಗತ ಹೆಸರನ್ನು ಅಳಿಸುವಿಕೆ, ಹಳೆಯ ಕಟ್ಟಡ ಕೆಡವಿ ಹೊಸ ಕಟ್ಟಡ ಕಟ್ಟುವಿಕೆ, ಹೆಸರು ಬದಲಾವಣೆ ಕೆಲಸಗಳು ಅಲ್ಲಿಗೆ ನಿಲ್ಲುವುದಿಲ್ಲ. ಅವಕ್ಕೆ ಸಂಬಂಧಿಸಿದ ಸಮುದಾಯ ಮತ್ತು ವ್ಯಕ್ತಿಗಳ ದುರುಳೀಕರಣಕ್ಕೆ ಕರೆದೊಯ್ಯುತ್ತವೆ. ಜರ್ಮನಿಯಲ್ಲಿ ಫ್ಯಾಸಿಸ್ಟರು ಯಹೂದಿಗಳಿಗೆ ಸೇರಿದ ಗುರುತುಗಳನ್ನು ಹೀಗೆಯೇ ಅನ್ಯೀಕ-ರಿಸಿದರು. ಬಳಿಕ ಅವರ ಸಂಹಾರ ಮಾಡಿದರು.

ದ್ವೇಷ ಭಾಷಣಗಳು, ವಾಣಿಜ್ಯ ನಿಷೇಧ, ಆಹಾರ ನಿಷೇಧ, ಉಡು-ಪಿನ ನಿರ್ಬಂಧಗಳು ಜನಾಂಗ ಹತ್ಯೆಗೆ ಕರೆದೊಯ್ಯುವಾಗ, ನಾಡಿನ ಸಾಮುದಾಯಿಕ ವಿವೇಕ ಹೇಗೆ ವರ್ತಿಸುತ್ತದೆ ಎಂಬುದೇ ಪ್ರಶ್ನೆ. ಅದು ಮೌನಸಮ್ಮತಿ ನೀಡಬಹುದು. ಇಲ್ಲವೇ ತನ್ನೊಳಗಿದ್ದ ವಿವೇಕವನ್ನು ಮತ್ತು ಕೂಡುಬಾಳಿನ ತತ್ವವನ್ನು ಜಾಗೃತಗೊಳಿಸಬಹುದು. ಈ ಜಾಗರಣದಲ್ಲಿ ದೇಶವನ್ನು ಬಹುತ್ವದ ನೆಲೆಯಲ್ಲಿ ಕಟ್ಟುವ ವಿವೇಕದ ಪರಂಪರೆಯು ನೆರವಿಗೆ ಬರಬಹುದು. ಪ್ರತಿಯಾದ ಪರ್ಯಾಯಗಳ ಹುಡುಕಾಟಕ್ಕೆ ಪ್ರೇರಿಸಬಹುದು. ಆದ-ರೆ ಈ ಸಾಮುದಾಯಿಕ ವಿವೇಕವು ಜಾಗೃತಗೊಳ್ಳದಿದ್ದರೆ, ಹಲವು ಧರ್ಮ ಭಾಷೆ ಸಮುದಾಯಗಳು, ಅವಕ್ಕೆ ಸಂಬಂಧಿಸಿದ ಚ-ರಿತ್ರೆಗಳನ್ನು ಕುರಿತು ಹೊರಗಿಡುವ, ಅನ್ಯಗೊಳಿಸುವ, ದ್ವೇಷಿಸುವ ಮತ್ತು ಅಳಿಸಿಹಾಕುವ ಪ್ರಕ್ರಿಯೆ ನ್ಯಾಯಬದ್ಧತೆ ಪಡೆದುಬಿಡುತ್ತದೆ.

ಈ ಹಿನ್ನೆಲೆಯಲ್ಲಿ ಭಾರತದ ಸಾಮುದಾಯಿಕ ವಿವೇಕವನ್ನು, ಕೂಡಿಬಾಳುವ ತತ್ವಕ್ಕೆ ಪೂರಕವಾಗಿ ಪ್ರಭಾವಿಸುವ, ಜೀವಂತವಾಗಿಡುವ ಕೆಲಸದ ಸವಾಲು 2024ರ ನಂತರ ವರ್ಷಗಳಲ್ಲಿ ತೀವ್ರವಾಗಲಿದ್ದು ಅದನ್ನು ಮೆಟ್ಟಿನಿಂತು ಸಾಕಾರಗೊಳಿಸಬೇಕಿದೆ. ಇದು ಈ ದೇಶದ ಸಾಮುದಾಯಿಕ ವಿವೇಕವು ಹೂಡಲಿರುವ ಹೊಸ ಸ್ವಾತಂತ್ರ್ಯ ಹೋರಾಟವೇ ಎಂದು ಪರಿಗಣಿಸಬೇಕಿದೆ. ಯಾಕೆಂದರೆ ನರೇಂದ್ರ ಮೋದಿ ಮತ್ತು ಬಿಜೆಪಿಯನ್ನು ವಿರೋಧಿಸಿ ಒಗ್ಗೂಡುತ್ತಿರುವ ವಿರೋಧಪಕ್ಷಗಳು, ಕೇವಲ ರಾಜಕೀಯ ಗೆಲುವನ್ನು ತರಬಲ್ಲವು. ಸೈದ್ಧಾಂತಿಕ ಗೆಲುವನ್ನಲ್ಲ. ಕಾರಣ, ಅದರೊಳಗಿರುವ ಅನೇಕರು ಮತೀಯವಾದದ ಜತೆಗೆ ಹಿಂದೆ ಸರಸವಾಡಿದವರು. ಮುಂದೆ ಅವಕಾಶ ಸಿಕ್ಕರೆ ಕೈಜೋಡಿಸಬಲ್ಲವರು.


ಕುವೆಂಪು ತಮ್ಮದೊಂದು ಪದ್ಯದಲ್ಲಿ ಹೊಸದೇಶ ಕಟ್ಟುವ ಪರಿಕಲ್ಪನೆಯನ್ನು ಮಂಡಿಸುತ್ತ 'ನಾನಳಿವೆ, ನೀನಳಿವೆ, ನಮ್ಮೆಲುವುಗಳ ಮೇಲೆ ಮೂಡುವುದು ನವಭಾರತದ ಲೀಲೆ' ಎಂದರು. ಇದೇ ಕಾಲಘಟ್ಟದಲ್ಲಿ ಬರೆದ 'ನರಬಲಿ' ಕವನದಲ್ಲಿ ಬೇಂದ್ರೆಯವರು ಕಾಳಿಯ ಬಾಯಲ್ಲಿ 'ಗಂಡುಸಾದರೆ ನನ್ನ ಬಲಿಗೊಡುವೆಯೇನು?' ಎಂಬ ಪ್ರಶ್ನೆಯನ್ನು ಅವಳನ್ನು ಪೂಜಿಸುವ ನರನಿಗೆ ಹೊರಡಿಸಿದರು. ಗುಲಾಮಗಿ-ರಿಯಿಂದ ಬಿಡಿಸಿಕೊಂಡು ಹೊಸ ದೇಶವೊಂದನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಅಳಿವು-ಉಳಿವುಗಳ ಆಯಾಮಗಳು ಯಾವಾಗಲೂ ಜತೆಯಲ್ಲಿರುತ್ತವೆ.

ಪರ್ಯಾಯ ಧರ್ಮ ಇಲ್ಲವೇ ಸಮಾಜ ರಾಜಕಾರಣ ಕಟ್ಟಲೆತ್ನಿಸಿದ ಬುದ್ಧ, ಶರಣರು, ಅಂಬೇಡ್ಕರ್, ಪೆರಿಯಾರ್ ಎಲ್ಲರೂ ತಮ್ಮ ಎದುರಿಗಿದ್ದ ಕೆಲವು ಕೆಡುಕುಗಳನ್ನು ಗುರುತಿಸಿದರು. ಅವು ಅಳಿಯಬೇಕೆಂದು ಬಯಸಿದರು. ಪ್ರಶ್ನೆಯೆಂದರೆ ಹಲವು ಧರ್ಮ ಪ್ರಾಂತ್ಯ ಭಾಷೆ ಸಂಸ್ಕೃತಿಗಳಿರುವ ನಾಡಿನಲ್ಲಿ ಯಾವುದನ್ನು ಉಳಿಸಿಕೊಂಡು ಯಾವುದನ್ನು ಕಳೆಯಲಾಯಿತು ಎಂಬುದರ ಮೇಲೆ, ಒಂದು ನಾಡು ಭವಿಷ್ಯದಲ್ಲಿ ರೂಪುಗೊಳ್ಳುವ ಚಹರೆಯ ರೂಪುರೇಶೆಗಳು ಸಿದ್ಧಗೊಳ್ಳುತ್ತವೆ. ನಾವು ಕಟ್ಟುವ ಧಾರ್ಮಿಕ ಕಟ್ಟಡಗಳು, ಗುಡ್ಡೆಹಾಕಿಕೊಂಡಿರುವ ಸಂಪತ್ತು, ಪಡೆದಿರುವ ರಾಜಕೀಯ ಗೆಲುವುಗಳು, ಯಾವೆಲ್ಲ ಸಂಗತಿಗಳನ್ನು ಬಲಿತೆಗೆದುಕೊಂಡಿವೆ ಎಂಬ ವಿದ್ಯಮಾನಗಳು ಆತ್ಮಾವಲೋಕನವನ್ನು ಹುಟ್ಟಿಸದೆ ಹೋದರೆ, ದೇಶವು ಮು-ರಿದ ಮನೆಯಾಗುವುದು.

ಈ ಅಭದ್ರತೆಯ ಹಿನ್ನೆಲೆಯಲ್ಲಿ ಭಾರತದ ರೈತರು ಎರಡು ವರ್ಷಗಳ ಹಿಂದೆ ನಡೆಸಿ ಪಡೆದ ಗೆಲುವು ನೆನಪಾಗುತ್ತಿದೆ. ದಲಿತರು ಮುಸ್ಲಿಮರು ಕರ್ನಾಟಕದಲ್ಲಿ ಎಚ್ಚರಿಕೆಯಲ್ಲಿ ಮತದಾನ ಮಾಡುವ ಮೂಲಕ ಬಿಜೆಪಿಯನ್ನು ಚುನಾವಣೆಯಲ್ಲಿ ಸೋಲಿಸಿದ ಪರಿ ನೆನಪಾಗುತ್ತಿದೆ; ಗುಜರಾತಿನ ಕೋಮುದಂಗೆಗಳಲ್ಲಿ ತಲೆಗೆ ಕೇಸರಿವಸ್ತ್ರ ಬಿಗಿದು, ಕೈಯಲ್ಲಿ ರಾಡು ಹಿಡಿದು ಕೇಕೆ ಹಾಕುತ್ತಿದ್ದ ಚಮ್ಮಾರ ತರುಣನು, ತನಗೆ ಕೊಲ್ಲಬೇಡಿ ಎಂಬಂತೆ ದೈನ್ಯದಿಂದ ಕೈಮುಗಿಯುತ್ತಿದ್ದ ಮುಸ್ಲಿಂ ವ್ಯಕ್ತಿಯೂ ಕೂಡಿಕೊಂಡು, ಕೇರಳದಲ್ಲಿ ಹೊಸ ಚಪ್ಪಲಿ ಅಂಗಡಿಯನ್ನು ಉದ್ಘಾಟನೆ ಮಾಡಿದ ಘಟನೆ ನೆನಪಾಗುತ್ತಿವೆ. ಇಂತಹ ಘಟನೆಗಳು ಸಣ್ಣವೆಂದು ತೋರುತ್ತವೆ. ಆದರೆ ಮುಂದಿನ ಕಷ್ಟಕರವಾದ ಹಾದಿಯಲ್ಲಿ ಮುಖ್ಯವಾದ ಹೆಜ್ಜೆಗಳಾಗಬಲ್ಲವು. ಯಾಕೆಂದರೆ, ರಾಜಕೀಯ ಜಯಾಪಜಯಗಳ ಆಚೆ ದೈನಿಕದಲ್ಲಿ ನೆಮ್ಮದಿಯ ಬದುಕನ್ನು ಕಟ್ಟುವ ಸಾಧ್ಯತೆಗಳನ್ನು ಇವು ಒಳಗೊಂಡಿವೆ. ಭಾರತವು ಹೀಗೆ ಕಟ್ಟುವ ಮತ್ತು ಕೆಡಹುವ ಎರಡೂ ಸಾಧ್ಯತೆಗಳಲ್ಲಿ ಯಾವಕಡೆಗೆ ವಾಲಿಕೊಳ್ಳುವುದೋ ಎಂಬ ಆತಂಕ ಮತ್ತು ಭರವಸೆಗಳು ಒಟ್ಟಿಗೆ 2024ನೇ ಹೊಸ ವರುಷವು ಮೂಡಿಸಿದೆ.

ಸೌಜನ್ಯ: ನಾನು ಗೌರಿ.ಕಾಮ್

## ಪ್ರೊ. ರಹಮತ್ ತರೀಕೆರೆ



**ರಹಮತ್ ತರೀಕೆರೆ ಕನ್ನಡನಾಡಿನ ಖ್ಯಾತ ಚಿಂತಕರು. ನಾಥಪಂಥ, ಕರ್ನಾಟಕದ ಸೂಫಿಗಳು, ಗುರುಪಂಥಗಳು- ಹೀಗೆ ನಾಡಿನ ಹಲವು ಬಹುತ್ವದ ಪಂಥಗಳು ಮತ್ತು ಸೌಹಾರ್ದ ಬದುಕಿನ ಬಗ್ಗೆ ವಿಶೇಷ ಅಧ್ಯಯನಗಳನ್ನು ಮಾಡಿ ಪುಸ್ತಕ ರಚಿಸಿದ್ದಾರೆ. ಇವರ ವಿಮರ್ಶಾ ಸಂಕಲನ 'ಕತ್ತಿಯಂಚಿನ ದಾರಿ'ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವ ಸಂದಿದೆ.**